1917-1918 సం॥ మద్రాసులో

శ్రీ నా॥ సరిదిఖల్నం త్రింయా
టంయు యేఁలిఖోనా నోకీ నల్లీ
వంతేవ స్టుబిడీనల్లి ఉలా
ఢంయు యేఁలికాస్త్రి త్రింధర్గా
కాని బ్రిక్షానీనిబంధిఖై బిగ్గీరయ్యి
యితయా నిక్షేపధి సంగారి
బ్రాన్నీనిబంధిఖై నీరిలాన్
యిచ్చయా రంపలప్పటి.
ఉక్కె త్రిగల్లు చాంకిర్లయు బ్రాక్హ
నన్నవు యిటంయాంగి నయ మెయు
కార్య ధర్మాలు విశిష్ట త్రింయా
నంకిక్షేతాకిరు నంక నంబిరా
నరిగలిప్పిదర్నాధల్లియుల్లి
చారలిగిన్నవ దేశ్భుమి. దాంఠిజి
తయుడనోమా మదర్థుడాయుత్పత్తి
తలయుడ ప్రతిపత్తి దయితాతి.

ಶ್ರೀಃ

ಜಯತು ಜಯತು ಭಗವಾನ್ ಶ್ರೀಲಕ್ಷ್ಮೀನೃಸಿಂಹಃ

ಭರತಖಂಡದಲ್ಲಿರುವ ವ್ಯಾಧಿಗ್ರಸ್ತರ ಉಪಯೋಗಾರ್ಥವಾಗಿ

ಶ್ರೀ ಶೃಂಗಗಿರಿಯಲ್ಲಿ ಪ್ರತಿಷ್ಠಿತವಾದ

ಆಯುರ್ಭೈಷಜ್ಯಮಂದಿರಂ

ಶ್ಲೋ॥ ಅಗಜಾನನ ಪದ್ಮಾರ್ಕಂ ಗಜಾನನಮಹರ್ನಿಶಂ ।
ಅನೇಕದಂತ ಭಕ್ತಾನಾಮೇಕದಂತಮುಪಾಸ್ಮಹೆ ॥

ಸುಶ್ರುತ, ಚರಕ, ವಾಗ್ಭಟ, ಮಾಧವಕಲ್ಪ ಮುಂತಾದ ಪ್ರಾಚೀನ
ವೈದ್ಯಗ್ರಂಥಗಳ ಆಧಾರ ಮತ್ತು ಅನುಭವಗಳಿಂದ ತಯಾ
ಮಾಡಿರುವ ಔಷಧಗಳ ಸೂಚೀ ಪತ್ರ ಪ್ರಕಾಶಕ,

ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತ ಶ್ರೀಮದಾದಿ
ಸರಸ್ವತೀ ವ್ಯಾಖ್ಯಾನ ಪೀಠಾಧಿಷ್ಠಿತ ಶ್ರೀಶೃಂಗಗಿರಿ

ಶ್ರೀಜಗದ್ಗುರು

ಶ್ರೀಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಭಿಃ

ಪರಿಪೋಷಿತ:—

ಕೆ. ಶೇಷ ಶಾಸ್ತ್ರೀ, ಆಯುರ್ಭಿಷಕ್ಪಾದ,

ಶೃಂಗೇರಿ, ಮೈಸೂರು ಪ್ರಾವಿನ್ಸ್.



Sri Venkatesa Press. Chickpet, Bangalore City.—1915.

ಆರ್ಯಭಿಷಕ್ಸಾದ, ಕೆ. ಶೇಷಶಾಸ್ತ್ರೀ.



Sri Venkatesa Press. Chickpet, Bangalore City.—1915.

ಆರ್ಯಭಿಷಕ್ರಾದ, ಕೆ. ಶೇಷಶಾಸ್ತ್ರಿ.

ಆರ್ಯ ಮಹೋದಯರಲ್ಲಿ ವಿಜ್ಞಾಪನಾ.

ಈಗ ಸುಮಾರು ೩೦೦ ವರುಷಗಳ ಹಿಂದೆ ನಮ್ಮ ಪೂರ್ವಿಕರ ಪ್ರೌಢರಾದ ಸಿಂಹಾದ್ರಿ ಭಟ್ಟರೆಂಬುವರು ಆಂಧ್ರ ದೇಶದಲ್ಲಿರುವ ಕಳ್ಯಂ ಎಂಬ ಗ್ರಾಮದಿಂದ ಶೃಂಗೇರಿಗೆ ಬಂದು ಆಗ ಜಗದ್ಗುರು ಪೀಠವನ್ನಲಂಕರಿಸುತ್ತಿದ್ದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಕೃಪೆಗೆ ಪಾತ್ರರಾಗಿ ಶಕ ೧೫೭೪ರಲ್ಲಿ ವೃತ್ತಿಯಂ ಸಂಪಾದಿಸಿ ಶೃಂಗೇರಿಯಲ್ಲಿ ನೆಲೆಯಾಗಿನಿಂತರು. ಅವರ ಪೌತ್ರರಾದ ಕಳ್ಯಂ ನಾರಸಿಂಹ ಭಟ್ಟರೆಂಬುವರು ಶ್ರೀಮದಭಿನವಸಚ್ಚಿದಾನಂದ ಭಾರತೀ ಸ್ವಾಮಿಗಳವರ ಕಾಲದಲ್ಲಿ ಶ್ರೀ ಸಂಸ್ಥಾನದಲ್ಲಿ ಅಧಿಕಾರ ಮಾಡುತ್ತಾ ಶ್ರೀಗಳವರ ಕೃಪೆಗೆ ಪಾತ್ರರಾಗಿದ್ದರಲ್ಲದೆ ನಗರದ ಸಂಸ್ಥಾನಾಧೀಶರ ಕೃಪೆಗೂ ಪಾತ್ರರಾದರು. ಅವರ ಪುತ್ರರಾದ ನರಸಿಂಹ ಭಟ್ಟರೆಂಬುವರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಂದ ಪರಿಪ್ರೋಷಿತರಾಗಿ ಅಧಿಕಾರ ಮಾಡುತ್ತಾ ಈಗಿನ ಸರ್ಟಿಫಿಕೇಟ್‌ನಂತಹ ಅಭಿನಂದನ ನಿರೂಪವನ್ನು ಪಡೆದರು. ನಮ್ಮ ಅಜ್ಜಂದಿರಾದ ಕಳ್ಯಂ ಸುಬ್ಬಾಶಾಸ್ತ್ರಿಗಳವರು ಶ್ರೀ ಜಗದ್ಗುರು ನರಸಿಂಹ ಭಾರತೀ ಸ್ವಾಮಿಗಳವರ ಕೃಪೆಗೆ ಪಾತ್ರರಾಗಿ ಅಧಿಕಾರ ಮಾಡುತ್ತಾ ಶ್ರೀಸಂಸ್ಥಾನದ ಅಭಿವೃದ್ಧಿಗೆ ಅನುಕೂಲವಾದ ಕಾರ್ಯಗಳನ್ನು ಮಾಡಿ ಪರಂಪರಾವರ್ಷಾಶನ ಮುಂತಾದ ಹಲವು ಅಭಿನಂದನ ನಿರೂಪಗಳನ್ನು ಪಡೆದು, ಮೈಸೂರು ಲೇಟ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ 'ಪ್ರಭುಗಳವರ ಕೃಪೆಗೂ ಪಾತ್ರರಾಗಿ ಅವರಿಂದಲೂ ಹಲವು ಅಭಿನಂದನಗಳನ್ನು ಪಡೆದು ಯಶಃಶರೀರಿಗಳಾದರು. ಈ ನಿರೂಪಗಳೆಲ್ಲವೂ ಈಗಲೂ ನಮ್ಮಲ್ಲಿವೆ. ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಮಹಾಸ್ವಾಮಿಗಳವರು ನನ್ನ ತಂದೆ ಕಳ್ಯಂ ಸಾಂಬಶಿವಶಾಸ್ತ್ರಿ

ಗಳನ್ನು ಸಾದರಾತಿಶಯದಿಂದ ಪರಿಪೋಷಿಸಿದರು. ನಾನು ಶ್ರೀ ಮಠದ ಸದ್ವಿದ್ಯಾಸಂಜೀವಿನೀ ಪಾಠಶಾಲೆಯಲ್ಲಿ ಸಾಹಿತ್ಯ ಶಾಸ್ತ್ರಾಧ್ಯಯನವನ್ನು ಮಾಡಿ ಆಯುರ್ವೇದ ಪಂಡಿತರಾದ ಅಜ್ಜಂದಿರಿಂದಲೂ, ವಿದ್ಯಾಗುರುಗಳಾದ ಬ್ರ. ವ. ಐ. ರಾಮಶಾಸ್ತ್ರಿಗಳಿಂದಲೂ, ತಂದೆ ಸಾಂಬಶಿವಶಾಸ್ತ್ರಿಗಳಿಂದಲೂ, ಅನುಭವೋಪದೇಶವನ್ನು ಪಡೆದು ಆಯುರ್ವೇದ ಗ್ರಂಥಾಧ್ಯಯನವನ್ನು ಮಾಡಿ ಗ್ರಂಥಾನುಭವಗಳಿಂದ ಈಗ ೧೦ ವರ್ಷಗಳಿಂದಲೂ ಆಯುರ್ವೇದ ವಿದ್ಯೆಯನ್ನು ಪ್ರಸರ್ಗಿಸುತ್ತಿರುವೆನು. ಈಗ ವ್ಯಾಖ್ಯಾನ ಪೀಠವನ್ನು ಅಲಂಕರಿಸುತ್ತಿರುವ ಶ್ರೀ ಜಗದ್ಗುರು ಚಂದ್ರಶೇಖರಭಾರತೀಮಹಾಸ್ವಾಮಿಗಳವರು ನನ್ನ ತಂದೆಯವರನ್ನೂ ನನ್ನನ್ನೂ ಪೂರ್ವದಂತೆಯೇ ಆದರದಿಂದ ಪರಿಪೋಷಿಸುತ್ತಿದ್ದಾರೆ.

ಈ ನನ್ನ ಆಯುರ್ವೇದ ಶಾಸ್ತ್ರವಿಜ್ಞಾನವು ಕೆಳಕಂಡ ಪ್ರಸಿದ್ಧ ಪ್ರಾಂತ್ಯದ ಪಂಡಿತವರ್ಯರ ಅಭಿನಂದನಪತ್ರಗಳಿಂದ ವಿದಿತವಾಗುತ್ತವೆ. ಈ ಕೆಳಗೆ ಕೆಲವನ್ನು ಕಾಣಿಸಿರುತ್ತೇನೆ. ಖಿಲವಾಗುತ್ತಿರುವ ನಮ್ಮ ಶ್ರೇಷ್ಠವಾದ ಈ ಆಯುರ್ವೇದ ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸಿ ತನ್ಮೂಲಕ ಪ್ರಚುರಪಡಿಸುವುದು ಮುಂತಾದ ಕಾರ್ಯಗಳಿಗೆ ಉದಾರ ಮನಸ್ಕರಾದ ಪ್ರತಿಯೊಬ್ಬ ಮಹನೀಯರೂ ತಮ್ಮ ತಮ್ಮ ಕೈಲಾದ ಮಟ್ಟಿಗೆ ಸಾಹಾಯ್ಯವಂ ಕಲ್ಪಿಸಿ ಪ್ರೋತ್ಸಾಹಪಡಿಸಬೇಕೆಂದು ಕೋರುವೆನು.

ಕೆ. ಶೇಷಶಾಸ್ತ್ರೀ.

N.B.—ಈ ಕ್ಯಾಟಲಾಗಿನಲ್ಲಿ ಪ್ರಮಾದದಿಂದ ಬಿದ್ದಿರುವ ಹಲವು ವರ್ಣವ್ಯತ್ಯಾಸವನ್ನು ಗುಣಗ್ರಾಹಿಗಳೆಲ್ಲರೂ ಸರಿಪಡಿಸಿಕೊಂಡು ಓದುವರೆಂದು ನಂಬಿರುತ್ತೇನೆ.

ಅಭಿನಂದನಗಳು (ಸರ್ಟಿಫಿಕೇಟ್‌ಗಳು.)

ಆಲ್ ಇಂಡಿಯನ್ ಆಯುರ್ವೇದಿಕ್ ಕಾನ್‌ಫರೆನ್ಸ್ ಸೆಕ್ರೆಟರಿ ಯವರು ನಮಗೆ ಸಂಸ್ಕೃತದಲ್ಲಿ ಕೊಡಿಸಿರುವ ಅಭಿನಂದನಲೇಖನಾಭಿಪ್ರಾಯವು.

" ತಾವು ಕಳುಹಿಸಿದ ಭಸ್ಮಗಳೂ ಇತರೌಷಧಗಳೂ ತಲುಪಿದವು. ತಾವು ಕಳುಹಿಸಿದ ಯಾವತ್ತು ಭಸ್ಮಗಳೂ ಪರೀಕ್ಷಿಸಲ್ಪಟ್ಟವು, ಅವುಗಳೆಲ್ಲವೂ ಬಹಳ ಚೆನ್ನಾಗಿ ಮಾಡಲ್ಪಟ್ಟವೆಯೆಂದು ನಮಗೆ ತಿಳಿಯಬರುತ್ತವೆ, ಔಷಧಗಳು ಶ್ಲಾಘ್ಯವಾಗಬೇಕಾದರೆ, ನೀವು ಮಾಡಿರುವಂತಹ ಪ್ರಯತ್ನವೇ ಬೇಕು. ಹಾಗೆ ಮಾಡಿದರೇ ಔಷಧಗಳು ಫಲಕಾರಿಗಳಾಗುವುವು. ಯಾವಾಗಲೂ ತಮ್ಮ ಅಭಿವೃದ್ಧಿಯನ್ನೇ ಕೋರುವೆವು. "

ಪೂನಾಸಿಟಿ ವಾಕೆಣ ಕರೋಪಾಭಿದ ಗೋವಿಂದ ತನಯ ಭಿಷಗ್ವರ್ಯ ರಂಗನಾಥ ಶಾಸ್ತ್ರಿಗಳು ಸಂಸ್ಕೃತದಲ್ಲಿ ಕೊಟ್ಟಿರುವ ಲೇಖನಾಭಿಪ್ರಾಯವು.

" ಈ ಶೇಷಶಾಸ್ತ್ರಿಗಳು ಈ ದಿನ (23-11-15) ಆಯುರ್ವೇದ ಸಭೆಗೆ ಬಂದರು. ಇವರು ಮಾಡಿರುವ ಔಷಧಗಳನ್ನು ಪರೀಕ್ಷಿಸಿದೆವು. ಇವರನ್ನೂ ಪರೀಕ್ಷಿಸಿದೆವು. ಇವರಿಗೆ ಮಾಧವನಿದಾನ ಯೋಗರತ್ನಾಕರ ಶಾರ್ಙ್ಗಧರಸಂಹಿತಾ ಮುಂತಾದ ಗ್ರಂಥಾಭ್ಯಾಸವು ಚೆನ್ನಾಗಿದೆ. ಇವರ ಎಲ್ಲಾ ಔಷಧಗಳೂ ಭಸ್ಮಗಳೂ ಅನುಭವಾನುಸಾರವಾಗಿಯೂ ಗ್ರಂಥಾನುಸಾರವಾಗಿಯೂ ಮಾಡಲ್ಪಟ್ಟಿವೆಯೆಂದು ನಿಶ್ಚಯಿಸುತ್ತೇವೆ. ಇವರಿಗೆ ಸಂಸ್ಕೃತದಲ್ಲಿರುವ

ನ್ಯೈಪುಣ್ಯದಿಂದ ಚರಕಾದಿ ಉದ್ಗ್ರಂಥಗಳನ್ನು ನೋಡಲು ಶಕ್ತರಾಗಿ ದಾರೆ. ಈ ಶ್ರೇಷ್ಠವಾದ ಆಯುರ್ವೇದವು ಆ ಪ್ರಾಂತ್ಯ ಎಲ್ಲಾ ಕಡೆಯಲ್ಲಿಯೂ ಇವರಿಂದ ಪ್ರಸರಿಸಲ್ಪಡಲಿ ಎಂದು ಕೋರುವೆವು."

ಪೂನಾಸಿಟಿ— ನಾರಾಯಣ ಎಸ್. ಪಿ., ಬಿ. ಎ. ಆನರ್ಸ್, ಯವರು ಇಂಗ್ಲೀಷಿನಲ್ಲಿ ಕೊಟ್ಟಿರುವ ಅಭಿನಂದನ ಲೇಖನಾಭಿಪ್ರಾಯಾಂಶ...

"ಇವರು ಸಂಸ್ಕೃತದಲ್ಲಿ ರಚಿಸಿರುವ ಕೆಲವು ಗ್ರಂಥಗಳನ್ನು ನಾನು ಓದಿ ನೋಡಿದೆನು, ಅವು ಒಳ್ಳೇ ಪ್ರಾಧಿಮೆಯನ್ನು ಹೊಂದಿವೆಯೆಂದು ತಿಳಿಯಬರುತ್ತದೆ. ಅಲ್ಲದೆ ಅವರು ಸಂಸ್ಕೃತದಲ್ಲಿ ರಚಿಸಿರುವ ನವೀನಪ್ರವೃತ್ತಿಯೇ ಅವರ ಪಾಂಡಿತ್ಯ ವಿಷಯದಲ್ಲಿ ಆಶ್ಚರ್ಯಾಸ್ಪದವಾಗಿರುತ್ತೆಂಬುವದಕ್ಕೆ ಸಾಕಾದಷ್ಟು ನಿದರ್ಶನವಾಗಿದೆ.

....

ಇವರ ಆಯುರ್ವೇದ ವಿದ್ಯೆಯನ್ನು ಪ್ರಕಾಶಪಡಿಸಲು ಪ್ರತಿಯೊಬ್ಬರೂ ಪ್ರೋತ್ಸಾಹ ಕೊಡಬೇಕು."

ಹುಬ್ಬಳ್ಳಿ ಪ್ಲೀಡರ್ ಬಿ. ವಿ. ಆಪಟೆ ಯವರು ಇಂಗ್ಲೀಷಿನಲ್ಲಿ ಕೊಟ್ಟಿರುವ ಲೇಖನಾಭಿಪ್ರಾಯಾಂಶ.

....

"ಇವರಿಗೆ ಸಂಸ್ಕೃತದಲ್ಲಿರುವ ಪೂರ್ಣಪಾಂಡಿತ್ಯವು ಆಯುರ್ವೇದ ವಿದ್ಯಾಭ್ಯಾಸಕ್ಕೆ ಪೂರ್ಣಸಹಾಯವಾದಿರುತ್ತದೆ. ಮುಖ್ಯವಾಗಿ ಆಯುರ್ವೇದೀಯಶಾಸ್ತ್ರವು ಮಲಿನವಾಗುತ್ತಿರುವ ಕಾಲದಲ್ಲಿ ಪ್ರತಿ ಒಬ್ಬರೂ ಅವರಿಗೆ ಸಹಾಯವನ್ನಿತ್ತು ಅವರ ವಿದ್ಯೆಯನ್ನು ಪ್ರೋತ್ಸಾಹ ಪಡಿಸುವದಕ್ಕೆ ಅರ್ಹರಾಗಿರುತ್ತಾರೆ"

ಆನಂದವನ ಸಂಸ್ಥಾನ ಪ್ರವರ್ತಕ ಮಹಾಶಯರು ಸಂಸ್ಕೃತದಲ್ಲಿ ಕೊಡಿಸಿರುವ ಅಭಿನಂದನಾಭಿಪ್ರಾಯವು,

" ಈ ಶೇಷಶಾಸ್ತ್ರಿಗಳಿಗೆ ಸಂಸ್ಕೃತ ಸಾಹಿತ್ಯದಲ್ಲಿಯೂ ವ್ಯಾಕರಣದಲ್ಲಿಯೂ ಇರುವ ಪಾಂಡಿತ್ಯವನ್ನೂ, ನಮ್ಮ ಆಯುರ್ವೇದವಿದ್ಯೆಯಲ್ಲಿರುವ ನೈಪುಣ್ಯವನ್ನೂ ನಮ್ಮಸಂಸ್ಥಾನ ಪಂಡಿತಪ್ರವರಮಹಾದೇವ ಶಾಸ್ತ್ರಿಗಳಿಂದ ತಿಳಿದು ಇವರಿಗೆ ಸರಸಬಾಲಗಣೇಶಃ ಶ್ರೀಬಾಲವಾಣೀ, ಆಯುರ್ವೇದಕಲಾವಿಭೂಷಣಃ, ಎಂಬ ಹೆಸರುಗಳನ್ನು ನಮ್ಮಸಂತೋಷಸೂಚಕವಾಗಿ ಕೊಟ್ಟಿರುತ್ತೇವೆ."

ಅಭಿನಂದನಗಳು.

ಔಷಧವನ್ನು ಉಪಯೋಗಿಸಿ ಗುಣಹೊಂದಿದವರ ಇತರ ಕೆಲವು ಸರ್ಟಿಫಿಕೇಟುಗಳು.

" ತಮ್ಮಿಂದ ತರಿಸಿದ ಅಶ್ವಗಂಧಾವಲೇಹ, ಶೀತಾಂಶುರಸ, ಇಚ್ಛಾಭೇದಿಮಾತ್ರೆ, ಸುದರ್ಶನಚೂರ್ಣ ಈ ಔಷಧಗಳಿಂದ ನನಗೆ ತೃಪ್ತಿಯುಂಟಾಗಿರುತ್ತೆ. ನಿಮ್ಮಲ್ಲಿ ತಯಾರಿಸುವ ಔಷಧಿಗಳ ವಿಷಯವನ್ನು ಈ ಪ್ರಾಂತ್ಯ ಬಹಳ ಮಟ್ಟಿಗೆ ಒಳ್ಳೇದೆಂದು ಪ್ರಸಿದ್ಧಪಡಿಸಿರುತ್ತೇವೆ"

ರೈಟರ್ ಜಿ. ನರಸಿಂಹಾಚಾರ್ಯ,
ತರೀಕೆರೆ.

" ತಾವು ಕಳುಹಿಸಿದ ಸಿಂದೂರ ಮತ್ತು ಮಾತ್ರೆಸಹ ತಲುಪಿತು. ಮನೆಯಲ್ಲಿ ಗಂಡು ಕೂಸು ಜನನವಾಗಿ ೭ ದಿನವಾಯಿತು

ತಮ್ಮ ಪ್ರತೀಪಾನವದಿಂದ ಕೂಸು ಬಾಣಂತಿ ಕ್ಷೇಮವಾಗಿರುತ್ತಾರೆ"

ಹೆಡ್ಮ್ಯಾಸ್ಟರ್ ಶ್ರೀನಿವಾಸರಾವ್,
ಹೊನ್ನಾಳಿ.

" ನಿಮ್ಮ ನವಾನಂದಭೈರವಮಾತ್ರೆಯು ಈ ಹವಾಕ್ಕೆ ಅನುಕೂಲ ಛಂದವಾಗಿರುತ್ತೆ. ಶೀತಾಂಶುರಸ ಮಾತ್ರೆಗಳು ಪಾಸಾಗಿರುತ್ತವೆ. ನವಾನಂದ ಮಾತ್ರೆಗಳೂ ನಮ್ಮ ಕಡೆಗೆ ಬಹು ಗುಣಗಳಾಗಿವೆ"

ಶ್ರೀ ಪಂಚಾಕ್ಷರ ಸ್ವಾಮಿಗಳು,
ಶಿವಪಕ್ಷಿ, ಬೆಳಗಾಂ.

"ನಿಮ್ಮಿಂದ ತರಿಸಿದ ನವಾನಂದ ಭೈರವರಸಮಾತ್ರೆ (೫೦) ಗಳಲ್ಲಿ ಕೆಲವನ್ನು ನಮ್ಮ ಸ್ನೇಹಿತರಿಗೆ ಕೊಟ್ಟೆನು. ಮತ್ತು ಇನ್ನು ಕೆಲವರಿಗೆ ಬಹಳ ದಿವಸಗಳಿಂದ ಬರುತ್ತಿದ್ದ ೩-೪ ದಿನ ಜ್ವರಕ್ಕೆ ಕೆಲವು ಮಾತ್ರೆಗಳನ್ನು ಕೊಟ್ಟೆನು. ನಿಮ್ಮ ಕ್ಯಾಟಲಾಗಿನಲ್ಲಿ ಕಂಡಂತೆ ಎಲ್ಲಾ ರೋಗಗಳನ್ನೂ ವಾಸಿಮಾಡುವವರಲ್ಲಿ ಇದು ಪ್ರಥಮಸ್ಥಾನವನ್ನು ಹೊಂದಿರುತ್ತದೆಯೆಂದು ನಾನು ದೃಢವಾಗಿ ಹೇಳುತ್ತೇನೆ. ದಯವಿಟ್ಟು.................. ಔಷಧಗಳನ್ನು ಕಳುಹಿರಿ."

ಎಂ. ಸುಬ್ಬರಾವ್, ಏಜಂಟ್,
ಅಂತರಸಂತೆ, ಮೈಸೂರು.

" ಅಯ್ಯಾ, ತಮ್ಮ ಔಷಧಿಯನ್ನು ಎಷ್ಟು ಹೊಗಳಿದರೂ ತೀರದು. ತಮ್ಮ ಔಷಧಿಯಿಂದ ನನ್ನ ದೇಹ ಬಿಳುಪು ಸಂಪೂರ್ಣ ಗುಣವಾಗಿದೆ. ಪ್ರಪಂಚದಲ್ಲೆಲ್ಲಿಯೂ ಇಂಥ ಔಷಧ ಸಿಕ್ಕಲಿಕ್ಕಿಲ್ಲ"

ಪಿ. ಯಂ. ಕೋರಗ,
ಮೂಡಿಗೆರೆ ತಾಲ್ಲೂಕು.

ಗ್ರಾಹಕರಿಗೆ ಸೂಚನೆ.

1. ಪ್ರಾಚೀನ ಆರ್ಷವೈದ್ಯಗ್ರಂಥಗಳ ಸಂಪೂರ್ಣ ಆಧಾರ ಮತ್ತು ಅನುಭವಗಳ ಮೇಲೆ ಆಯಾಯ ಋತುಗುಣಗಳಿಗನುಗುಣವಾಗಿ ಪ್ರತಿಯೊಂದು ದ್ರವ್ಯವನ್ನೂ ಶುದ್ಧಿಮಾಡಿ ಔಷಧಗಳನ್ನು ತಯಾರ್ಮಾಡಿರುತ್ತೇವೆ.

2. ಕೆಲವು ರೋಗಗಳಿಗೆ ತಿಳಿವಳಿಕೆ ಇಲ್ಲದೆ ಔಷಧವಿಲ್ಲವೆನ್ನುವರು. ಇದುಸರಿಯಲ್ಲ. ಆಯಾಯ ರೋಗಾನುಸಾರವಾಗಿ ಔಷಧವು ಶೀಘ್ರವಾಗಿಯೂ ಸಾವಕಾಶವಾಗಿಯೂ ವ್ಯಾಪಿಸುತ್ತದೆ. ಹಾಗೆ ಔಷಧವು ವ್ಯಾಪಿಸದಿದ್ದರೆ ಆತ್ರೇಯಾದಿ ಮಹರ್ಷಿಗಳು ಪ್ರತಿಯೊಂದು ರೋಗಕ್ಕೂ ತಿಳಿಸಿರುವ ಚಿಕಿತ್ಸಾಕ್ರಮವು ನಿಷ್ಫಲವಾಗುತ್ತಿದ್ದಿತು, ಈ ಕ್ರಮವೇ ಔಷಧಗಳು ವ್ಯಾಪಿಸುವವು ಎಂಬುದಕ್ಕೆ ನಿದರ್ಶನವು.

3. ರೋಗಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನು ಸಂಕೋಚವಿಲ್ಲದೆ ತಿಳಿಸಬೇಕು.

(a) ಪುರುಷನೋ ? ಸ್ತ್ರೀಯೋ ?
(b) ಮದುವೆಯಾಗಿದೆಯೇ ?
(c) ವಯಸ್ಸು
(d) ರೋಗವು ಯಾವಾಗ ಹೇಗೆ ಪ್ರಾರಂಭವಾಯಿತು ?
(e) ನೀವುಮಾಡಿದ ಚಿಕಿತ್ಸೆಯೇನು ?
(f) ಈಗಿನಸ್ಥಿತಿ ಹೇಗಿದೆ ?
(g) ತಿಳಿಸಬೇಕಾದ ವಿಶೇಷ ಸಂಗತಿಗಳು.

4. ಈ ಪಟ್ಟಿಯಲ್ಲಿರುವ ಔಷಧಗಳೇ ಅಲ್ಲದೆ ಅವರವರ ಪ್ರಕೃತಿಗನುಗುಣವಾದ ಔಷಧಗಳೂ ಮಾಡಿ ಕಳುಹಿಸಲ್ಪಡುವುವು. ಇನ್ನೂ ಅನೇಕ ವಿಧವಾದ ಲೇಹ, ತೈಲ, ಷರಬತ್ತು, ಚೂರ್ಣ ಭಸ್ಮಗಳೂ ಸಿಗುವವು.

5. ಔಷಧದ ಅನುಪಾನ ಪತ್ರಿಕೆಯು ವಿ. ಪಿ. ಯೊಡನೆ ಕಳು ಹಿಸಲ್ಪಡುವುದು.

6. ಔಷಧಿಗಳಿಗೆ ವಿಶೇಷವಾಗಿ ಇಚ್ಛಾಪಥ್ಯವೇ ತಿಳಿಸಲ್ಪಡುವು ದರಿಂದ ಎಲ್ಲರಿಗೂ ಅನುಕೂಲವಾಗಿದೆ.

7. ಔಷಧಗಳ ಬೆಲೆಗೆ ವಿ. ಪಿ. ಛಾರ್ಜು ಸೇರಿಲ್ಲವು.

8. ಪೇಟ್ಬಾತ್ವ ಔಷಧ ಗ್ರಾಹಕರಿಗೆ ಯೋಗ್ಯವಾದ ಕಮಿಷನ್ ದೊರೆಯುವುದು.

9. ಈ ಪುಸ್ತಕದಲ್ಲಿ ಮೊದಲು ಆರೋಗ್ಯ ರಕ್ಷಣೆಯ ವಿಷಯ ವಾಗಿ ಶಾಸ್ತ್ರಪ್ರಮಾಣ ಪುರಸ್ಸರವಾದ ಸೂಚನೆಯೂ ಆಮೇಲೆ ನಮ್ಮಲ್ಲಿರುವ ಔಷಧಗಳ ವಿವರಣೆಯೂ ಪ್ರಕಾಶಿಸಲ್ಪಟ್ಟಿವೆ. ಕೆಲವು ರೋಗಗಳ ಚಿಕಿತ್ಸೆಯೂ ತಿಳಿಸಲ್ಪಟ್ಟಿದೆ.

10. ಈ ಪುಸ್ತಕವನ್ನು ಸಾವಕಾಶವಾಗಿ ಓದಿದರೆ ನಮ್ಮ ಪೂರ್ವಿಕರಿಗೆ ಆಯುರ್ವೈದ್ಯದಲ್ಲಿದ್ದ ಪಾಂಡಿತ್ಯ,ವೈದ್ಯದ ಪ್ರಾಧಿಮ ಮುಂತಾದ ಹಲವು ವಿಷಯಗಳನ್ನು ನೀವೇ ಊಹಿಸುವಿರಿ.

ಕೆ. ಶೇಷಶಾಸ್ತ್ರೀ, ಆರ್ಯಭಿಷಕ್ಪಾದ,

ಶೃಂಗೇರಿ.

Aryabishakpada K. Sesha Sastry, Sringeri.

ದಿ ಆಲ್ ಇಂಡಿಯ ಆಯುರ್ವೇದಿಕ್ ಕಾನ್ಫರೆನ್ಸ್; ಆಯುರ್ವೇದ ವಿದ್ಯಾಪೀಠ ಸೆಕ್ರೆಟರಿ; ಮತ್ತು ಆಲ್ ಇಂಡಿಯ ಆಯುರ್ವೇದ ಮಹಾಮಂಡಲ ಪರೀಕ್ಷಾ ಸೆಕ್ರೆಟರಿ ಅಲಹಾಬಾದ್

ಯವರು ಸಂಸ್ಕೃತದಲ್ಲಿ ಕೊಡಿಸಿರುವ ಅಭಿನಂದನ ಲೇಖನಾಭಿಪ್ರಾಯವು.

ಶ್ರೀಮಂತೋಮಹೋದಯಾಃ,

ತಮ್ಮ ಔಷಧಗಳು ಕ್ರಮವಾಗಿ ರಚಿಸಲ್ಪಟ್ಟು ಸಂಪೂರ್ಣ ಫಲದಾಯಕಗಳಾಗಿವೆಯೆಂದು ಅಂಗೀಕರಿಸಿರುತ್ತೇವೆ. ಶ್ಲಾಘನೀಯವಾದ ತಮ್ಮ ಆಯುರ್ವೇದ ಶಾಸ್ತ್ರೀಯಕಾರ್ಯೋದ್ಯೋಗಕ್ಕಾಗಿ ಬಹು ಸಂತೋಷಪಡುತ್ತೇವೆ. ಆಯುರ್ವೇದಶಾಸ್ತ್ರವು ತಮ್ಮ ಪ್ರಾಂತ್ಯದಲ್ಲಿ ಮಾತ್ರವಲ್ಲದೆ ಭರತಖಂಡದಲ್ಲೆಲ್ಲಾ ಖಿಲವಾಗಿರುವುದು ಪ್ರತಿಯೊಬ್ಬ ದೇಶಹಿತೈಷಿಯ ಮನಸ್ಸಿಗೂ ಖೇದಾವಹವಾಗಿದೆ! ಆದರೆ ಈ ಕಾಲದಲ್ಲಿ ಇದನ್ನು ಅಭಿವೃದ್ಧಿಗೆ ತರಲು ಪ್ರಯತ್ನಮಾಡಬೇಕೆಂದು ಅಭಿಮಾನ ಪೂರ್ವಕವಾಗಿ ತಿಳಿಸುವೆವು. "ಪ್ರಯತ್ನವು ಕಾರ್ಯ ಸಿದ್ಧಿಯನ್ನುಂಟುಮಾಡುವುದು." ಇತರ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಜನರೂ ಆಯುರ್ವೇದಶಾಸ್ತ್ರಾಭಿವೃದ್ಧಿ ಪ್ರಯತ್ನವನ್ನು ಮಾಡುತ್ತಿರುವರು. ತಮ್ಮಿಂದಲೂ ಆ ಪ್ರಾಂತ್ಯದಲ್ಲಿ ಈ ಪ್ರಯತ್ನವು ಮಾಡಲ್ಪಡಲೇಬೇಕು. ಆಯುರ್ವೇದ ಮಹಾಮಂಡಲವು ತಮಗೆ ಸಹಾಯವನ್ನುಂಟು ಮಾಡುವುದು.

(ಭವದೀಯಃ)

N. B. —ನಮ್ಮ ಕರ್ಣಾಟಾಂಧ್ರ ಪ್ರಾಂತ್ಯಗಳಲ್ಲಿರುವ ಪ್ರತಿಯೊಬ್ಬ ದೇಶ ವತ್ಸಲರೂ ಈ ಮೇಲೆ ಆಜ್ಞಾಪಿಸಿರುವ ದೇಶ ಸೇವಾಕಾರ್ಯದಲ್ಲಿ ತತ್ಪರರಾಗಿ ನನ್ನನ್ನು ಪ್ರೋತ್ಸಾಹಿಸುವರೆಂದು ನಂಬಿದೇನೆ.

ಕೆ. ಶೇಷಶಾಸ್ತ್ರಿ, A. V. C

ಶ್ರೀಃ

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪಾದ,

ಶೃಂಗೇರಿ.

ಶ್ಲೋ॥ ಶರೀರಮಾದ್ಯಂಖಲುಧರ್ಮ ಸಾಧನಂ ॥ ಆರೋಗ್ಯಾನ್ನ ಪರಂಭಾಗ್ಯಂ ॥ ಆರೋಗ್ಯಂಮಹದೈಶ್ವರ್ಯಂ ವಿನಾ ವ್ಯರ್ಥಂಹಿ ಜೀವಿನಾಂ ॥

ಮನುಷ್ಯನಿಗೆ ಆರೋಗ್ಯವೇ ಐಶ್ವರ್ಯಕ್ಕಿಂತಲೂ ಹೆಚ್ಚಾದ ಸುಖವನ್ನು ಕೊಡುವುದು, ಆರೋಗ್ಯಕ್ಕಿಂತಲೂ ಬೇರೆ ಭಾಗ್ಯವಿಲ್ಲವು; ಎನ್ನುವಂತೆ ಪ್ರತಿ ಮನುಷ್ಯನಿಗೂ ಶರೀರಾರೋಗ್ಯವು ಸಹಜವೂ ಸ್ವಾಭಾವಿಕವೂ ಆಗಿದೆ. ನಮ್ಮ ಅನ್ನಪಾನಾದಿಗಳಲ್ಲಿ ಮಿತವಾಗಿರುವುದು ಆರೋಗ್ಯಕರವು, ಪ್ರತಿಕೂಲವಾಗಿ ನಡೆಯುವುದು ಅನಾರೋಗ್ಯಕರವು.

ಶ್ರೀಃ

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪ್ರದ,
ಶೃಂಗೇರಿ.

ಶ್ಲೋ॥ ಶರೀರಮಾದ್ಯಂಖಲುಧರ್ಮ ಸಾಧನಂ ॥ ಆರೋಗ್ಯಾನ್ನ ಪರಂಭಾಗ್ಯಂ ॥ ಆರೋಗ್ಯಂಮಹದೈಶ್ವರ್ಯಂ ವಿನಾ ವ್ಯರ್ಥಂಹಿ ಜೀವಿನಾಂ ॥

ಮನುಷ್ಯನಿಗೆ ಆರೋಗ್ಯವೇ ಐಶ್ವರ್ಯಕ್ಕಿಂತಲೂ ಹೆಚ್ಚಾದ ಸುಖವನ್ನು ಕೊಡುವುದು, ಆರೋಗ್ಯಕ್ಕಿಂತಲೂ ಬೇರೆ ಭಾಗ್ಯವಿಲ್ಲವು; ಎನ್ನುವಂತೆ ಪ್ರತಿ ಮನುಷ್ಯನಿಗೂ ಶರೀರಾರೋಗ್ಯವು ಸಹಜವೂ ಸ್ವಾಭಾವಿಕವೂ ಆಗಿದೆ. ನಮ್ಮ ಅನ್ನಪಾನಾದಿಗಳಲ್ಲಿ ಮಿತವಾಗಿರುವುದು ಆರೋಗ್ಯಕರವು, ಪ್ರತಿಕೂಲವಾಗಿ ನಡೆಯುವುದು ಅನಾರೋಗ್ಯಕರವು.

ಶ್ಲೋ॥ ಹುತಭುಜ್ಮಿತ ಭುಕ್ಶ್ಚೈವ ಕಾಲ ಭುಕ್ಕರ್ಮ ಭುಕ್ಚಯಃ॥
ಭವತ್ಯರೋಗೀಸತತಂ ನಭವೇನ್ನ ಭಜೇತ್ಸುಖಂ ॥

ನಿತ್ಯಕರ್ಮಗಳನ್ನು ತೀರಿಸಿ ಹದವಾಗಿ ಪಾಕವಾದ ಪದಾರ್ಥವನ್ನು ಮಿತವಾಗಿ ಕಾಲಕಾಲಕ್ಕೆ ಭುಜಿಸುವವನು ಎಂದಿಗೂ ರೋಗಿಯಾಗುವುದಿಲ್ಲವು, ಹಾಗೆ ಮಾಡದವನು ಸುಖಿಯಾಗುವದಿಲ್ಲ; ಆದುದರಿಂದ ಸ್ವಾಭಾವಿಕ ಪ್ರಕೃತಿಯು ತನ್ನ ಶಕ್ತಿಯು ಇರುವ ವರವಿಗೂ ರೋಗಕ್ಕೆ ಆಸ್ಪದವನ್ನು ಕೊಡುವುದಿಲ್ಲ. ಶರೀರದ ಸ್ವಾಭಾವಿಕ ಶಕ್ತಿಯು ಕುಂದಿದರೇ ರೋಗವು ಪ್ರವೇಶವಾಗಿ ಬೆಳೆಯುವುದು. ಶರೀರಾರೋಗ್ಯವನ್ನು ಲಕ್ಷಿಸದೆ ನಡೆಯುವುದರಿಂದ ರೋಗಗಳು ಹುಟ್ಟುತ್ತವೆ.

ಶ್ಲೋ॥ ಅನೇಕದೋಷಜುಷ್ಟಸ್ಯ ದೇಹಸ್ಯೈಕೋಮಹಾನ್‌ಗುಣಃ।
ಯೋಯಥಾವರ್ತಯೇದೇನಂ ತಂತಥೈವಾನುವರ್ತತೇ ॥

ವಾತ, ಪಿತ್ತ, ಕಫಗಳೆಂಬ ದೋಷಗಳಿಂದ ಕೂಡಿದೇ ದೇಹದಲ್ಲಿ ಒಂದು ಒಳ್ಳೇಗುಣವಿದೆ. ಯಾವನು ದೇಹವನ್ನು ಹೇಗೆ ಇರಿಸಿಕೊಂಡಿರುವನೋ ಅವನನ್ನು ಅದು ಹಾಗೆಯೇ ಅನುವರ್ತಿಸಿಕೊಂಡಿರುವುದು. ಒಂದು ರೋಗಕ್ಕೆ ಕಾರಣವು ಅನೇಕಸಾರಿ ಬಹುಚಿಕ್ಕದಾಗಿರುವುದು. ಇದ

ನ್ನು ಮುಂಜಾಗ್ರತೆಯಿಂದ ನಿವಾರಣೆ ಮಾಡಿಕೊಳ್ಳಬಹುದು. ಏವಂಚ ಏನೂ ಚಿಹ್ನೆ ಇಲ್ಲದೆ ಕಾಲವಶವಾಗಿ ಬರುವ ರೋಗಗಳಿಗೂ ಆಗಂತುಕಾಪಾಯಗಳಿಗೂ ಮನುಷ್ಯ ಯತ್ನವಿಲ್ಲವು. ಆದರೂ ದೇವರು ನಮ್ಮ ಕೈಲಾದ ಮಟ್ಟಿಗೆ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೂ, ರೋಗಗಳಿಂದದಕ್ಕುಂಟಾಗುವ ಕೆಡುಕನ್ನು ತಪ್ಪಿಸಿಕೊಳ್ಳುವ ಹಾಗೂ, ಉಪಾಯಗಳನ್ನು ಕಲ್ಪಿಸಿದ್ದಾನೆ. ನಮ್ಮ ಪೂರ್ವಿಕರ ಆರೋಗ್ಯಮಾರ್ಗವೂ ಈಗಿನ ಆಂಗ್ಲೇಯ ಮಾರ್ಗವೂ ವಿಶೇಷ ವ್ಯತ್ಯಸ್ತವಾಗಿಲ್ಲ. ಈಗ ಕಾಲಾನುಗುಣವಾದ ಕೆಲವು ಬದಲಾವಣೆಗಳು ಏರ್ಪಟ್ಟಿವೆ. ಈ ಅಂಶವು ಉಭಯಗ್ರಂಥಗಳನ್ನು ಪರಿಶೀಲನೆ ಮಾಡಿದರೆ ವ್ಯಕ್ತವಾಗುವುದು. ಆರೋಗ್ಯ ಮಾರ್ಗೋಪದೇಶಕರಾದ ಆರ್ಯ ಮಹರ್ಷಿಗಳ ವಂಶದಲ್ಲಿ ಹುಟ್ಟಿದ ನಾವು ವಂಶಪಾರಂಪರ್ಯದಿಂದ ಬಂದ ಆರೋಗ್ಯ ಸೂತ್ರಗಳನ್ನುಲ್ಲಂಘಿಸಿ ನಡೆದು ಅನೇಕ ರೋಗಗಳಿಗೆ ಭಾಗಿಗಳಾಗಿ ಅಲ್ಪಾಯುಸ್ಸಿನಲ್ಲಿಯೇ ಇಹಲೋಕ ವ್ಯಾಪಾರದಿಂದ ನಿವೃತ್ತರಾಗುವೆವಾದರೆ ಆ ಮಹತ್ತರವಾದ ದೋಷವು ನಮ್ಮದಲ್ಲದೆ ಇನ್ನಾರದು ? ಈ ವಿಷಯವು ೪೬,೦೦೦ ಗ್ರಂಥಗಳುಳ್ಳ ಆತ್ರೇಯಸಂಹಿತೆ, ಚರಕ, ಸುಶ್ರುತ, ಮುಂತಾದ ಮಹರ್ಷಿ ಗ್ರಂಥಗಳನ್ನು ಓದಿದರೆ

ವಿಶದವಾಗಿ ತಿಳಿಯುವುದಲ್ಲವೇ ? ಆಯುರ್ವೇದ ಸೀಮಂತರತ್ನರಾದ ಮಹರ್ಷಿಗಳು ನಿರ್ಮಲವಾಯು, ನೀರು, ಆಹಾರ ಮುಂತಾದ ಪ್ರಾಣಿ ರಕ್ಷಕ ವಿಷಯಗಳನ್ನುಪದೇಶ ಮಾಡಿರುತ್ತಾರೆ. ಇಲ್ಲಿ ಒಂದೆರಡು ಸಂಗತಿಗಳನ್ನು ತಿಳಿಯಬಹುದು.

ಶ್ಲೋ॥ ವಾಯುರಾಯುರ್ಬಲಂವಾಯು । ರ್ವಾಯುರ್ಧಾತಾ
ಶರೀರಿಣಾಂ ॥

ನಿರ್ಮಲವಾದ ವಾಯುವು - ಆಯುಷ್ಯವನ್ನು ಕೊಡುವುದು, ಬಲಕರವು, ಪ್ರಾಣಿಗಳ ಬದುಕುವಿಕೆಗೆ ಮುಖ್ಯ ಸಾಧನವು.

ಶ್ಲೋ॥ ಪಾನೀಯಂ ಪ್ರಾಣಿನಾಂಪ್ರಾಣಾಸ್ತದಾಯತ್ತಂಹಿ ಜೀವ
ನಂ।ದೇಹಿನಾಂಸರ್ವದಾಪಥ್ಯಂ ಪಾನೀಯಂತಪ್ತಶೀತಲಂ॥

ಒಳ್ಳೇ ನೀರೇ ಪ್ರಾಣಿಗಳ ಜೀವನ ಕಾರಣವು ; ಈ ನೀರಿನಿಂದಲೇ ಈ ಜೀವವು ಬದುಕಿದೆ. ಮನುಷ್ಯನು ಯಾವಾಗಲೂ ಕಾದಾರಿದ ನೀರನ್ನು ಕುಡಿಯಬೇಕು.

ಶ್ಲೋ॥ ಭೋಜನಂಬಲಕೃತ್ತೃಪ್ತಿಕಾರಕಂ ದೇಹಧಾರಕಂ ।
ಬುದ್ಧಿಧೈರ್ಯಸ್ಮೃತೀನಾಂಚಕಾರಕಂಸಂಪ್ರಕೀರ್ತಿತಂ॥

ಆಹಾರವು ಬಲವನ್ನೂ, ತೃಪ್ತಿಯನ್ನೂ, ಬುದ್ಧಿಯನ್ನೂ, ಧೈರ್ಯವನ್ನೂ, ಸ್ಮೃತಿಯನ್ನೂ ಉಂಟುಮಾಡು

ತ್ತದೆ. ಮತ್ತು ದೇಹವು ಸವೆಯದಂತೆ ಪೋಷಿಸುತ್ತದೆ. ದಿನಕ್ಕೆ ಎರಡು ಸಾರಿ ಊಟಮಾಡಬೇಕೆಂಬುವುದೇ ಆಯುರ್ವೇದ ಮತವು. ಮಧ್ಯಾಹ್ನ ೧೧-೧೨ ಗಂಟೆಗೂ ರಾತ್ರಿ ೮ ಗಂಟೆಗೂ ಊಟಮಾಡಬೇಕು. ಮಧ್ಯದಲ್ಲಿ ಊಟಮಾಡಬಾರದು. ಅಗ್ನಿಹೋತ್ರಕ್ಕೆ ಸರಿಯಾದ ಈ ವಿಧಿಯನ್ನು ಮೀರಬಾರದು. ಈಗ ಮೂರುಹೊತ್ತು (ದಿನಕ್ಕೆ)ಆಹಾರ ತೆಗೆದುಕೊಳ್ಳುವುದು ಆಂಗ್ಲೇಯಪದ್ಧತಿಯಾಗಿದೆ.

ಶ್ಲೋ॥ ಸಾಯಂಪ್ರಾತರ್ಮನುಷ್ಯಾಣಾಮಶನಂಶ್ರುತಿಚೋದಿತಂ ।
ನಾಂತರಾಭೋಜನಂಕುರ್ಯಾದಗ್ನಿಹೋತ್ರಸಮೋವಿಧಿಃ॥

ಎಂತ ಉಕ್ತವಾಗಿದೆ.

ಶ್ಲೋ॥ ವ್ಯಾಯಾಮದೃಢಗಾತ್ರಸ್ಯವ್ಯಾಧಿರ್ನಾಸ್ತಿಕದಾಚನ॥ ಲಾ
ಘವಂಕರ್ಮಸಾಮರ್ಥ್ಯಂಸ್ಥೈರ್ಯಂದುಃಖಸಹಿಷ್ಣುತಾ।
ದೋಷಕ್ಷಯೋಗ್ನಿವೃದ್ಧಿಶ್ಚವ್ಯಾಯಾಮಾದುಪಜಾಯ
ತೇ । ಶರೀರಾಯಾಸಜನಕಂಕರ್ಮವ್ಯಾಯಾಮಉಚ್ಯತೇ॥

ಶರೀರಕ್ಕೆ ಆಯಾಸವನ್ನುಂಟುಮಾಡುವ ಕೆಲಸವೇ ವ್ಯಾಯಾಮವು. ವ್ಯಾಯಾಮದಿಂದ ಕೆಲಸಮಾಡುವ ಶಕ್ತಿಯೂ, ಚಟುವಟಿಕೆಯೂ, ಕಷ್ಟಸಹನವೂ, ಪಿತ್ತಾದಿ ದೋಷಗಳ ನಾಶವೂ, ಅಗ್ನಿ ಬಲವೂ ಉಂಟಾಗುತ್ತವೆ.

ಚೆನ್ನಾಗಿ ವ್ಯಾಯಾಮ ಮಾಡಿ ದೃಢಪಟ್ಟ ದೇಹವುಳ್ಳವನಿಗೆ ಯಾವರೋಗವೂ ಬರುವದಿಲ್ಲವು.

ಶ್ಲೋ|| ಆಲಸ್ಯಾದನ್ನದೋಷಾಚ್ಚ ಮೃತ್ಯುರ್ವಿಪ್ರಾಂಜಿಘಾಂಸತಿ||

ಸೋಮಾರಿಯಾಗಿ ಕೆಲಸ ಮಾಡದಿರುವುದರಿಂದಲೂ, ಮಿತಿಮೀರಿದ ತಿಂಡಿಯಿಂದಲೂ ಮೃತ್ಯುವು ಕ್ರಮೇಣ ಪ್ರಾಣವನ್ನು ತೆಗೆಯುವುದು.

ಶ್ಲೋ || ನಿದ್ರಾಸುಖಕರೀಸ್ವಪ್ತಿಶ್ಚ ಶ್ರಮನೇತ್ರರುಗಾಪಹಾ । ಹಿತ್ವಾಪ್ರಾಕ್ಸ್ವಪ್ತಿಮೌಯಾಮೌನಿಶಿಸ್ವಾಪೋವರೋಮತಃ || ಬ್ರಾಹ್ಮೇಮುಹೂರ್ತೆ ಚೋತ್ಥಾಯ ||

ನಿದ್ರೆಯು ಸುಖವನ್ನು ಉಂಟು ಮಾಡುತ್ತದೆ. ಶರೀರದ ಆಯಾಸವನ್ನೂ ನೇತ್ರಸಂತಾಪವನ್ನೂ ಪರಿಹರಿಸುತ್ತದೆ. ರಾತ್ರಿ ೯-೧೦ ಗಂಟೆಗೆ ಮಲಗಿ ಬೆಳಿಗ್ಗೆ ೪-೫ ಗಂಟೆಗೆ ಏಳಬೇಕು ಸೂರ್ಯನು ಹುಟ್ಟುವಾಗಲೂ ಮುಳುಗುವಾಗಲೂ ಸೋಮಾರಿಯಾಗಿ ಮಲಗಿರಬಾರದು.

ಶ್ಲೋ || ಸುರಮ್ಯೇಸಮಭೂದೇಶೇ ಸುಗವಾಕ್ಷಪ್ರಣಾಳಿಕೇ । ಸುಖಮಾರುತಸಂಚಾರೇಗೃಹೇಸೌಖ್ಯಂಸಮಾಪ್ನುಯಾತ್ ||
ಗೃಹಸ್ಯಪಶ್ಚಿಮೇಸದಾವೀಥೀಮಲನಿರ್ಹರಣಸ್ಥಲಂ । ಸಂಜ್ಞಾದ್ವಯಗತಾನಾಂಹಿನೇಹಾನಾಂಕಾರಯೇತ್ತಥಾ ||
ವಾತಾಯನಂ ಪೃಥಕ್ಕೋಷ್ಠೇಕುರ್ಯಾದ್ವ್ಯಾವತ್ತುಖಾ

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪ್ರದ, ಶೃಂಗೇರಿ.

ಸಹ || ಕಟಿಘ್ನೇಷು ನ ಗೃಹಂ ಕುರ್ಯಾತ್ ನಾನೂಪೇಷು ಕ
ದಾಚನ || ಸುಧಾತೇಷು ಗೃಹೇ ಕುರ್ಯಾತ್ ಪ್ರತಿಮಾ
ಸಂಚಪರ್ವಣಿ ||

ಮನೆಯು ನಿರ್ಮಲವಾದ ಸಮಭೂಮಿಯಲ್ಲಿರಬೇಕು. ಜೌಗು ಪ್ರದೇಶದಲ್ಲಿಯೂ ನೀರು ನಿಂತಿರುವ ಸ್ಥಳದಲ್ಲಿಯೂ ಕಟ್ಟಬಾರದು. ನಿರ್ಮಲವಾದ ಗಾಳಿಯು ಬರುವ ಹಾಗೆ ಮನೆಯು ಹಿಂದೆಯೂ ಮುಂದೆಯೂ ಬಯಲಿರಬೇಕು. ಮನೆಯು ಪ್ರತಿಯೊಂದು ಕೊಠಡಿಯಲ್ಲಿಯೂ ಧಾರಾಳವಾಗಿ ಗಾಳಿಯೂ ಬೆಳಕೂ ಬೀಳುವಹಾಗೆ ಕಿಟಕಿಗಳನ್ನಿಡಬೇಕು. ಮನೆಯ ಸುತ್ತಲೂ ಬಿದ್ದ ನೀರು ಹರಿದು ಹೋಗುವ ಹಾಗೆ ಚರಂಡಿಗಳಿರಬೇಕು. ಮನೆಯ ಕಸ ಮುಂತಾದ ಕಲ್ಮಷಗಳನ್ನು ಪ್ರತ್ಯೇಕವಾದ ಸ್ಥಳಕ್ಕೆ ಹಾಕಿ ಕ್ರಮವಾಗಿ ದೂರಕ್ಕೆ ಸಾಗಿಸಬೇಕು. ಮನೆಯ ಸುತ್ತಲೂ ಉದ್ಯಾನವನವಿರಬೇಕು. ಮನೆಗೆ ತಿಂಗಳು ತಿಂಗಳಿಗೂ ಪರ್ವದಿನಗಳಿಗೂ ಸುಣ್ಣವನ್ನು ಹಚ್ಚಬೇಕು. ಹೀಗಿರುವ ಮನೆಯಲ್ಲಿ ವಾಸ ಮಾಡುವ ಮನುಷ್ಯನು ಆರೋಗ್ಯವಾಗಿರುವನು.

ಶ್ಲೋ|| ಉಷ್ಣೋದಕೈಸ್ಸಲವಣೈಃ ಕುರ್ಯಾತ್ ಸಮ್ಮಾರ್ಜನಂ
ಗೃಹೇ||ಸಮ್ಮಾರ್ಜನಂಪ್ರಕುರ್ವೀತ ಸಂಧ್ಯಯೋರುಭಯೋರಪಿ||

ಕಲ್ಮಷವನ್ನು ನಾಶಮಾಡುವ ಲವಣಮಿಶ್ರ ಮಾಡಿದ ಬಿಸಿ ನೀರಿನಿಂದ ಮನೆಯನ್ನು ಗುಡಿಸಿ ಸಾರಿಸಬೇಕು. ಪ್ರಾತಃ

Aryabishakpada K. Sesha Sastry, Sringeri.

ಸಂಧ್ಯಾಕಾಲಗಳಲ್ಲಿಯೂ ಹೀಗೆಯೇ ಮಾಡಿ ಮನೆಯನ್ನು ಚೊಕ್ಕಟವಾಗಿಡಬೇಕು.

ಶ್ಲೋ॥ ನಾಪ್ಸುಮೂತ್ರಪುರೀಷಂವಾಷ್ಠೀವನಂ ಸಮಾಚರೇತ್॥

ನದಿ, ಬಾವಿ, ಮುಂತಾದವುಗಳ ನೀರನ್ನು ಮಲ ಮೂತ್ರಗಳಿಂದಲೂ, ಉಗಳುವುದರಿಂದಲೂ, ಕೆಡಿಸಬಾರದು.

ಶ್ಲೋ॥ ಶೌಚಂಪವಿತ್ರಮಾಯುಷ್ಯಮ್ ಅಲಕ್ಷ್ಮೀಕಲಿನಾಶನಂ॥

ಯಾವಾಗಲೂ ನಿರ್ಮಲವಾಗಿರುವಿಕೆಯಿಂದ, ಮನಃ ಪರಿಶುದ್ಧವೂ, ಆಯುರ್ವೃದ್ಧಿಯೂ ಉಂಟಾಗುತ್ತವೆ. ದರಿದ್ರವೂ, ಪಾಪವೂ, ನಾಶವಾಗುವುವು.

ಶ್ಲೋ॥ ನಯೋನಿರ್ನಾಪಿಸಂಸ್ಕಾರೋನಶ್ರುತಂನಚಸಂತತಿಃ।
ಕಾರಣಾನಿದ್ವಿಜತ್ವಸ್ಯವೃತ್ತಮೇವಹಿ ಕಾರಣಂ॥

ಮನುಷ್ಯನಯೋಗ್ಯತೆಗೆ ಸಂಸ್ಕಾರವೂ, ಶಾಸ್ತ್ರಾಧ್ಯಯನವೂ ಒಳ್ಳೇವಂಶವೂ ಹೇಗೆಕಾರಣವೋ ಹಾಗೆಯೇ ಅವನ ಸದಾಚಾರವೂ ಕೂಡ ಕಾರಣವು.

ಶ್ಲೋ॥ ಸುರಾಪಾನಂ ನಕುರ್ವೀತ ಸರ್ವಶ್ರೇಯೋಪಹಾರಕಂ॥

ತನು ಮನ ಧನಗಳನ್ನು ನಾಶಮಾಡುವ ಮದ್ಯಪಾನವನ್ನು ಮಾಡಲೇ ಬಾರದು.

ಶ್ಲೋ॥ ದೃಷ್ಟಿಪೂತಂನ್ಯಸೇತ್ಪಾದಂ ವಸ್ತ್ರಪೂತಂಪಿಬೇಜ್ಜಲಂ।
ಸತ್ಯಪೂತಾಂವದೇದ್ವಾಚಂಮನಃಪೂತಂಸಮಾಚರೇತ್॥

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪಾದ, ಶೃಂಗೇರಿ.

ಕಣ್ಣಿಗೆ ನಿರ್ಮಲವಾದ ಸ್ಥಳದಲ್ಲಿ ತಿರುಗಾಡಬೇಕು. ಕಾದಾರಿದ ನೀರನ್ನು ಕುಡಿಯಬೇಕು. ನಿಜವಾದ ಮಾತನಾಡಬೇಕು. ಮನಶ್ಶುದ್ಧವಾಗಿ ಕೆಲಸ ಮಾಡಬೇಕು. ಉದಯಕಾಲದಲ್ಲಿ ಮಾಡತಕ್ಕ ಅವರವರ ನಿತ್ಯಕರ್ಮಗಳಿಂದ ಅನೇಕ ರೋಗಗಳು ನಿವಾರಣೆಯಾಗುವ ವಿಷಯಗಳೂ ; ಅಭ್ಯಂಜನ, ತಾಂಬೂಲ, ದಂತಧಾವನ ಮತ್ತು ಪ್ರತಿದಿನವೂ ಮಾಡಬೇಕಾದ ಕೆಲಸಗಳು ಮತ್ತು ವಸಂತಾದಿ ಋತುಚರ್ಯೆಗಳು, ದೇಶ ವಾಯು ಗುಣಗಳು ಇವೇ ಮುಂತಾದ ನಿತ್ಯಾರೋಗ್ಯ ಸೂತ್ರಗಳು ಸವಿಸ್ತಾರವಾಗಿ ಆರ್ಷ ಆಯುರ್ವೇದ ಶಾಸ್ತ್ರಗಳಲ್ಲಿ ಉಕ್ತವಾಗಿವೆ.

ನಮ್ಮ ಆಯುರ್ವೈದ್ಯರು ದೇಹದರಚನಾ ಕ್ರಮಗಳ ಮತ್ತು ದೇಹೇಂದ್ರಿಯ ವ್ಯಾಪಾರಗಳ ಪರಿಜ್ಞಾನದಲ್ಲಿಯೂ ನಾಡಿಗಳ ಚಲನ ಪರಿಜ್ಞಾನದಲ್ಲಿಯೂ ಅಸಮಾನರಾಗಿದ್ದರು ದೇಹದಲ್ಲಿ ವಾತ, ಪಿತ್ತ, ಶ್ಲೇಷ್ಮಗಳೆಂಬ ಮೂರು ಧಾತುಗಳಿವೆ. ವಾಯುವು, ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನಗಳೆಂದು ಐದು ವಿಧವು. ಹೃದಯದಲ್ಲಿರುವ ವಾಯುವೇ ಪ್ರಾಣವಾಯುವು. ಅಪಾನವಾಯುವು ಹೊಕ್ಕಳ ಕೆಳಗಡೆ ಇದೆ. ಇದರಿಂದಲೇ ಮಲ, ಮೂತ್ರ, ಇಂದ್ರಿಯ, ವಿಸರ್ಜನೆ ಯಾಗುವುದು, ಭುಕ್ತ

ಪರಿಣಾಮ ಹೇತುವಾದ (ಆಹಾರಜೀರ್ಣಕ್ಕೆ ಕಾರಣವಾದ) ಸಮಾನವಾಯುವು ಉದರದಲ್ಲಿರುವುದು. ವ್ಯಾನವಾಯುವು ದೇಹದ ಸರ್ವಾವಯವದಲ್ಲೂ ವ್ಯಾಪಿಸಿರುವುದು. ಉದಾನ ವಾಯುವು ಕಂಠದ ಮೇಲ್ಗಡೆ ಇರುವುದು. ಇವಲ್ಲದೆ ನಾಗ, ಕೃಕರ, ಕೂರ್ಮ, ದೇವದತ್ತ, ಧನಂಜಯ ಎಂಬ ಐದು ಭೇದವೂವುಂಟು. ಪಾಚಕ, ರಂಜಕ, ಸಾಧಕ, ಅರೋಚಕ, ಭ್ರಾಜಕವೆಂದು ಪಿತ್ತವು ಐದು ವಿಧವಾಗಿರುವುದು. ಕ್ಲೇದನ, ಅವಲಂಬನ, ರಸನ, ಸ್ನೇಹನ, ಶ್ಲೇಷ್ಮಣಗಳೆಂದು ಶ್ಲೇಷ್ಮವು ಐದು ವಿಧವಾಗಿರುವುದು. ಇದಲ್ಲದೆ ಶರೀರದಲ್ಲಿ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜ, ಶುಕ್ಲವೆಂಬ ಏಳು ಧಾತುಗಳಿರುವವು. ಪ್ರಾಣವಾಯುವಿನಿಂದ ಆಹಾರವು ಆಮಾಶಯವನ್ನು ಪಡೆದು ಅದರಲ್ಲಿರುವ ೬ ರಸಗಳು ಕ್ರಮವಾಗಿ ಜೀರ್ಣಿಸಿ ಪಕ್ವಾಶಯವನ್ನು ಪಡೆಯುತ್ತದೆ. ಅದರ ಅಸಾರವಾದ ಜಲವು ನಾಡಿಗಳಿಂದ ತರಲ್ಪಟ್ಟು ಮೂತ್ರತ್ವವನ್ನು ಹೊಂದುತ್ತದೆ. ಪಕ್ವಾಶಯದಲ್ಲಿ ನಿಲ್ಲುವ ಅಸಾರ ಭಾಗವೇ ಮಲವು. ಈ ಮಲವು ಪ್ರವಾಹಿಣೀ, ಸರ್ಜನೀ, ಗ್ರಾಹಿಕೆಗಳೆಂಬ ವಲಿತ್ರಯಗಳ ಮಾರ್ಗದಿಂದ ಅಪಾನ ವಾಯು ಪ್ರೇರಿತವಾಗಿ ಹೊರಪಡುತ್ತದೆ. ಸಾರವಾದ ಭಾಗವು ಸಮಾನ ವಾಯುವಿನಿಂದ ಹೃದಯವನ್ನು ಹೊಂದಿಸಲ್ಪಟ್ಟು ಪಿತ್ತದಿಂದ ಪಾಚಿತವಾಗಿ

ರಕ್ತಗತವಾಗುವುದು. ಆಹಾರವು ಕೋಶಗಳನ್ನು ಪಡೆದು ಪಚನವಾಗುವ ವಿಧವು ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಪ್ರಪಂಚ ಆಹಾರವು ಜಠರ ಕೋಶದಲ್ಲಿ ಪಚನವಾದಾಗ ಬೆಳ್ಳಗಿರತಕ್ಕ ರಸವಾಗಿ ಅಲ್ಲಿಂದ ಕರುಳಿಗೆ ಬಂದು ರಕ್ತವಾಗುವುದು. ಈ ರಕ್ತದಿಂದ ಮಾಂಸವೂ; ಮಾಂಸದಿಂದ ಕೊಬ್ಬೂ; ಕೊಬ್ಬಿನಿಂದ ಅಸ್ಥಿಯೂ, ಅಸ್ಥಿಯಿಂದ ಮಜ್ಜೆಯೂ; ಮಜ್ಜೆಯಿಂದ ಶುಕ್ಲವೂ ಉಂಟಾಗುವುವು. ಹಾರೀತ ಋಷಿಗಳು ಸಂಹಿತೆಯಲ್ಲಿ ರಕ್ತವು ಸದಾ ಚಲಿಸುತ್ತಿರಬೇಕೆಂದು ಹೇಳಿದಾರೆ. ಗಂಡಸರ ದೇಹದಲ್ಲಿ, ಶ್ಲೇಷ್ಮ, ಆಮ, ಪಿತ್ತ, ವಾತ, ಮಲ, ಜಲ, ಎಂಬ ೬ ಕೋಶಗಳುಂಟು, ಸ್ತ್ರೀಯರ ದೇಹದಲ್ಲಿ ಗರ್ಭಕೋಶ, ಕ್ಷೀರಕೋಶಗಳು ಹೆಚ್ಚಾಗಿರುವುವು. ದೇಹದಲ್ಲಿ 210 ಸಂಧಿ ಬಂಧಗಳೂ, 9 ಸ್ನಾಯುಗಳೂ ಇರುವವು. ಪುರುಷರ ಶರೀರದಲ್ಲಿ, ನಾಸಿಕಾರಂಧ್ರ ೨. ನೇತ್ರ ೨. ಕರ್ಣ ೨. ಬಾಯಿ ೧. ಮಲದ್ವಾರ ೧. ಜಲದ್ವಾರ ೧. ಹೀಗೆ ನವದ್ವಾರಗಳೂ ಸ್ತ್ರೀದೇಹದಲ್ಲಿ ಮೇಲಿನವಲ್ಲದೆ ಗರ್ಭದ್ವಾರ ೧. ಕ್ಷೀರದ್ವಾರ ೨. ಹೀಗೆ ಮೂರು ದ್ವಾರಗಳು ಅಧಿಕವಾಗಿಯೂ ಇರುವವು. ಶರೀರದಲ್ಲಿ 5 ವಿಧ (ವರ್ಗ) ಮರ್ಮಸ್ಥಾನಗಳಿರುವುವು. ಈ ಐದರಲ್ಲಿ ಮೊದಲನೆಯ

ವರ್ಗಕ್ಕೆ ೧೯ ಮರ್ಮಸ್ಥಾನಗಳು ಸೇರಿವೆ. ಇವುಗಳಿಗೆ ಸ್ವಲ್ಪ ಪೆಟ್ಟಾದರೂ ಪ್ರಾಣಹಾನಿಯೇ ಸಂಭವಿಸುವುದು. ಎರಡನೆಯ ವರ್ಗಕ್ಕೆ ೩೩ ಮರ್ಮಸ್ಥಾನಗಳಿವೆ. ಇವಕ್ಕೆ ಘಾಸಿಯಾದರೆ ಕಾಲಾಂತರದಲ್ಲಿ ಮರಣ ಕಾರಣವಾಗುವುದು. ಮೂರನೇ ವರ್ಗಕ್ಕೆ ಸೇರಿದ 44 ಮರ್ಮಸ್ಥಾನಗಳಿಗೆ ಘಾಸಿಯಾದರೆ ಅವಯವಗಳ ಉಪಯೋಗವು ಕೆಡುತ್ತದೆ. ನಾಲ್ಕನೆಯ ವರ್ಗಕ್ಕೆ ಸೇರಿದ ೮ ಮರ್ಮಸ್ಥಾನಗಳಿಗೆ ಪೆಟ್ಟು ಬಿದ್ದರೆ ಹೆಚ್ಚಾಗಿ ನೋವು ಉಂಟಾಗುವದು. ಅನ್ಯಪದಾರ್ಥಗಳು ಅಂತರ್ಗತವಾಗಲಾಗಿ ಹೊರಕ್ಕೆ ತೆಗೆಯುವ ಪ್ರಯತ್ನ ಮಾಡಿ ತೆಗೆದರೆ ಮರಣ ಉಂಟಾಗುವ ಮೂರು ಮರ್ಮಸ್ಥಾನಗಳು ; ಹೀಗೆ ೧೦೭ ಮರ್ಮಸ್ಥಾನಗಳಿರುವವು. ಹೀಗೆಯೇ ನಾಡಿಗಳೂ ಅವುಗಳ ಸ್ವರೂಪಾದಿಗಳೂ ವಿಸ್ತಾರವಾಗಿವೆ.

ವಾತ ಪಿತ್ತ ಶ್ಲೇಷ್ಮಗಳ ವ್ಯತ್ಯಾಸವೇ ರೋಗಕ್ಕೆ ಕಾರಣವು. ವಿಶ್ವಾಮಿತ್ರರ ಪುತ್ರರಾದ ಸುಶ್ರುತರು ಸಾಧಾರಣವಾಗಿ 7 ಕಾರಣಗಳಿಂದ ರೋಗವು ಹುಟ್ಟುವದೆನ್ನುತ್ತಾರೆ.

1. (a) ತಂದೆಯ ವೀರ್ಯವು ಕೆಟ್ಟಿರುವುದು,
   (b) ತಾಯಿಯ ಗರ್ಭಕೋಶವು ಕೆಟ್ಟಿರುವುದು;
2. (a) ತಾಯಿಯು ಗರ್ಭಿಣಿಯಾದಾಗ ಬಿಡಬೇಕಾದ (ಅಪಥ್ಯ) ಆಹಾರವನ್ನು ತಿನ್ನುವುದು,

---

(b) ಆಕೆಯು ಬಯಕೆ ನೆರವೇರದಿರುವ ಕೊರತೆ.

3. ಹುಟ್ಟುವ ಮೇಲೆ ಸ್ರೋತಸ್ಸುಗಳ ವ್ಯತ್ಯಾಸದಿಂದ ವಾತ ಪಿತ್ತ ಶ್ಲೇಷ್ಮಗಳು ಕ್ರಮಗೆಡುವುದು.

4. ಆಗಂತುಕಾಪಾಯಗಳು (ಬೀಳುವುದು, ಗಾಯ, ಚೇಳು, ಹಾವುಗಳ ಬಾಧೆ ಮುಂತಾದುವು).

5. ವಾಯುಗುಣ ದೇಶಗುಣಗಳ ಅಕ್ರಮ.

6. ಪಿಶಾಚಾವೇಶಾದಿ ದೈವಿಕ ವ್ಯಾಧಿ ನಿಮಿತ್ತಗಳು ಎಂದರೆ ದೈವ, ಭೂತ, ಪಿಶಾಚ, ಬಾಲಗ್ರಹಾದಿಗಳ ಹಿಡಿಯುವುದು ಮುಂತಾದವುಗಳಿಂದ ಪ್ರಾಪ್ತವಾಗುವ ರೋಗಕಾರಣಗಳು (ಆಯುರ್ವೈದ್ಯದಲ್ಲಿ ಶರೀರದಲ್ಲಿ ಭೂತು ನಾಡಿಯೆಂಬೊಂದು ನಾಡಿಯುಂಟೆಂದೂ ವಾಯುವಿಶೇಷ ದಿಂದ ಪರ್ವದಿನಗಳಲ್ಲಿ ಗ್ರಹಭೂತಗಳು ದೇಹದಲ್ಲಿ ಸೇರುವು ವೆಂದೂ, ಹೇಳಿ ಗ್ರಹಭೂತಗಳು ಹಿಡಿದವರ ಲಕ್ಷಣ, ಚೆಷ್ಟೆ ಗಳೂ ಅದಕ್ಕೆ ತಕ್ಕ ಚಿಕಿತ್ಸೆಗಳೂ ಹೇಳಲ್ಪಟ್ಟಿವೆ. ಈ ದೈವ ಭೂತಗಳಿರುವೆಂಬ ಸಂಗತಿಯು ಆಂಗ್ಲೇಯರಿಗೂ, ಮುಸ ಲ್ಮಾನರಿಗೂ ಅಭಿಮತವೆಂದು ಅರಬಿಯನ್‌ನೈಟ್ಸ್ ಮುಂತಾದ ಕಥೆಗಳಿಂದ ತಿಳಿಯಬರುತ್ತದೆ. ಈ ಕಥೆಗಳು ಕಲ್ಪಿತ ಗಳೆಂದರೂ ಕಲ್ಪನೆಯಲ್ಲಿ ಪ್ರಮಾಣ ಪ್ರಸಿದ್ಧಗಳು ಅಪೇಕ್ಷಿತ ವಾಗುವುವು.)

---

7 ಜೀರ್ಣಶಕ್ತಿಯ ಕೊರತೆಗಳು.

ಜೀರ್ಣೇಂದ್ರಿಯವು ಪೂರ್ಣವಾಗಿ ಶರೀರಕ್ಕೆ ಸಂಬಂಧ ಪಟ್ಟಿದೆ. ಅದರ ವ್ಯತ್ಯಾಸವಿಲ್ಲದೆ ಯಾವರೋಗವೂ ಹುಟ್ಟು ವದಿಲ್ಲ.

ಶ್ಲೋ ॥ ಅಪಕ್ವೋನ್ನರಸಶ್ಲೇಷ್ಮಾ ದೋಷೋನಪಕ್ವೋಗ್ನಿಲಾಘು
ವಾತಃ । ಸಮೂಲಂ ಸರ್ವರೋಗಾಣಾಂ ಮಾಮ ಇತ್ಯಭಿ
ಧೀಯತೆ ॥

ಜಠರಾಗ್ನಿಯಲ್ಲಿ ಅನ್ನವು ಪಚನವಾಗುತ್ತಿರುವಾಗ ಯಾವ ಅನ್ನರಸವು ಪಾಕವಾಗದೆ ನಿಲ್ಲುವುದೋ, ಆ ಅಪಕ್ವಾನ್ನ ರಸವೇ ಆಮವು. ಈ ಆಮವೇ ಎಲ್ಲಾ ರೋಗಕ್ಕೂ ಮೂಲ ಕಾರಣವು. ರೋಗವು ಮೇಲೆ ಹೇಳಿದ ಯಾವದೊಂದು ವಿಧ ದಿಂದ ಹುಟ್ಟಿದರೂ ಒಡನೆ ತಕ್ಕ ಚಿಕಿತ್ಸೆಯನ್ನು ಮಾಡ ಬೇಕು. ರೋಗಗಳನ್ನು ನಿದಾನ, ಪೂರ್ವರೂಪ, ರೂಪ, ಉಪಶಯ, ಸಂಪ್ರಾಪ್ತಿ ಎಂಬ ಐದು ಬಗೆಗಳಿಂದ ಗೊತ್ತು ಮಾಡಬೇಕೆಂದು ವಿದ್ಯಾರಣ್ಯರು ಹೇಳುತ್ತಾರೆ.

ಶ್ಲೋ॥ ನಿದಾನಂ ಪೂರ್ವರೂಪಾಣಿ ರೂಪಾಣ್ಯುಪಶಯಸ್ತಥಾ ।
ಸಂಪ್ರಾಪ್ತಿಶ್ಚೇತಿವಿಜ್ಞಾನಂ ರೋಗಾಣಾಂ ಪಂಚಧಾ
ಸ್ಮೃತಂ॥

ನಾಡಿಜ್ಞಾನದಿಂದಲೂ ಮಲ, ಮೂತ್ರ, ಶಬ್ದ, ಸ್ಪರ್ಶ, ರೂಪ, ನೇತ್ರ, ಆಸ್ಯ, ಜಿಹ್ವಾ ಎಂಬ ಅಷ್ಟಪರೀಕ್ಷೆಯಿಂದ

ಇಂಥಾರೋಗವೆಂದು ನಿಶ್ಚಯಿಸಬಹುದು. ನಾಡಿಗಳು ಕೈಗಳಲ್ಲಿ ಎರಡು, ಕಾಲುಗಳಲ್ಲಿ ಎರಡು, ಕಂಠಮೂಲ ನಾಸಿಕಾಮೂಲಗಳಲ್ಲಿ ಎರಡೆರಡು ಹೀಗೆ ೮ ನಾಡಿಗಳನ್ನು ಪರೀಕ್ಷಿಸಬೇಕು. ಹಸ್ತ ಕುಕ್ಷಿಗೆ ಮುಂತಾದುವುಗಳಲ್ಲಿರುವ ನಾಡಿಗಳು ಪ್ರತ್ಯೇಕವಾದ ಲಕ್ಷಣಗಳನ್ನೇ ತಿಳಿಯಪಡಿಸುವುವು. ಇದು ಶಾಸ್ತ್ರಜ್ಞನಾದ ಅನುಭಾವಿಕನಾದ ವೈದ್ಯನ ಹೃದ್ಗೋಚರವಾಗಿದೆ.

ರೋಗವು ಸ್ವಲ್ಪವಾಗಿದೆಯೆಂದು ಉದಾಸೀನರಾಗಬಾರದು. ಬೆಂಕಿ, ಶಸ್ತ್ರ, ವಿಷಗಳಂತೆ ಕೆಡುಕಾದ ರೋಗವು ಸ್ವಲ್ಪವಾಗಿದ್ದರೂ ಬಹುವಾಗಿ ಪೀಡಿಸುತ್ತದೆ. ಆದುದರಿಂದ ರೋಗವು ತಲೆದೋರಿದ ಕೂಡಲೆ ತಕ್ಕ ಚಿಕಿತ್ಸೆಯನ್ನು ಮಾಡಬೇಕು.

ಶ್ಲೋ || ಜಾತಮಾತ್ರಶ್ಚಿಕಿತ್ಸ್ಯಸ್ತು ನೋಪೇಕ್ಷ್ಯೋಽಲ್ಪತಯಾ ಗದಃ । ವಹ್ನಿಶಸ್ತ್ರವಿಷೈಸ್ತುಲ್ಯಸ್ಸ್ವಲ್ಪೋಪಿವಿಕರೋತ್ಯಸೌ ||

ರೋಗಕ್ಕೆ ತಕ್ಕ ಚಿಕಿತ್ಸೆ ಮಾಡದೆ ಆಯುಷ್ಯವು ಪೂರ್ಣವಾಗಿದ್ದರೆ, ಬದುಕಿರುತ್ತಾನೆಂತ ಯೋಚಿಸುವದು ತಪ್ಪು. ಗಾಳಿಯಿಂದ ಮರೆಮಾಡದೆ ಎಣ್ಣೆ ತುಂಬದೆ ಎಂದು ದೀಪವನ್ನು ಬಿರುಗಾಳಿಗೆ ಬಿಟ್ಟರೆ ಆ ದೀಪವು ಆರದೆ ನಿಲ್ಲುವುದೇ?

ಶ್ಲೋ || ಶತಿಮಾದ್ಯುಷಿನಸ್ತ್ವಸ್ಯಾ ಽಪಾಮುಸ್ಯರ್ಸ್ಯ ಚಿಕಿತ್ಸಿತಃ |
ಪ್ರಾಣಸ್ತ್ಯಪಿತ್ತೈರಾದಾದಿಃ ಪ್ರೋಕ್ತೋ ಽಥರ್ವಾಣಿಕಾತ್ಸ್ಯಪಾ ||

ಮನುಷ್ಯನ ಜೀವಮಾನಕಾಲದಲ್ಲಿ ನೂರೊಂದು ಮೃತ್ಯುಗಳು ಸಂಭವಿಸುತ್ತವೆ. ಅವುಗಳಲ್ಲಿ ಒಂದೇ ಒಂದು ಕಾಲ ಮೃತ್ಯುವು. ಇದು ಪ್ರಾಣವನ್ನು ತೆಗೆಯುವುದು. ಉಳಿದ ನೂರು ಮೃತ್ಯುಗಳು (ಅಪಮೃತ್ಯು) ಆಗಾಗ್ಗೆ ಸಂಭವಿಸಿದರೂ ಚಿಕಿತ್ಸೆಯನ್ನು ಕ್ರಮವರಿತು ಮಾಡಿದರೆ ಪ್ರಾಣವನ್ನು ಬದುಕಿಸಿಕೊಳ್ಳಬಹುದೆಂದು ಅಥರ್ವ ಋಷಿಗಳು ಹೇಳುತ್ತಾರೆ. ಇದು ಸತ್ಯವು. ನಮ್ಮ ಆರ್ಯ ಋಷಿಗಳು ಬಹುಕಾಲ ಚಿರಜೀವಿಗಳಾಗಿದ್ದುದೇ ಇದಕ್ಕೆ ಸಾಕ್ಷಿಯಲ್ಲವೇ ?

ಶ್ಲೋ || ಏಕೋತ್ತರಶತಂ ಮೃತ್ಯೋರಾಥರ್ವಾಣಾಃ ಪ್ರಚಕ್ಷತೇ |
ತತ್ರೈಕಃ ಕಾಲಸಂಯುಕ್ತಃ ಶೇಷಾಸ್ತ್ವಾಗಂತವಸ್ಮೃತಾಃ ||

ಪ್ರಾಣವು ಕುತ್ತಿಗೆಗೆ ಬರುವವರೆಗೂ ಚಿಕಿತ್ಸೆಯನ್ನು ಬಿಡದೆ ಮಾಡುತ್ತಿರಬೇಕು; ಹಾಗೆ ಮಾಡುತ್ತಿದ್ದರೆ ಸಾಯುವುದಾಗಿ ನಾವು ತಿಳಿದವನೂ ಒಂದು ವೇಳೆ ಬದುಕಬಹುದಾಗಿದೆ.

ಶ್ಲೋ || ಯಾವತ್ಕಂಠಗತಪ್ರಾಣಸ್ತಾವತ್ಕಾರ್ಯಾ ಪ್ರತಿಕ್ರಿಯಾ | ಕದಾಚಿದ್ದೈವಯೋಗೇನ ದೃಷ್ಟಾರಿಷ್ಟೋಽಪಿ ಜೀವತಿ ||

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪಾದ, ಶೃಂಗೇರಿ.

ಪ್ರಾಣಿಗೆ ಉಸಿರಾಡುವವರೆಗೂ, ಔಷಧವು ಇಳಿಯುವವರೆಗೂ, ಬಿಡದೆ ಚಿಕಿತ್ಸೆ ಮಾಡಬೇಕೆಂದೂ, ದೈವಗತಿಯು ಹೀಗೆಯೇ ಎಂದು ನಿರ್ಣಯಿಸಲಾಗುವದಿಲ್ಲವೆಂದೂ, ಮಹಾ ರೋಗಿಯೂ ಬದುಕಿರುವನೆಂದೂ ರಸರತ್ನ ಸಮುಚ್ಚಯದಲ್ಲಿ ವಾಗ್ಭಟರು ಹೇಳಿದಾರೆ.

ಶ್ಲೋ|| ಯಾವದುಚ್ಛ್ವಸಿತಿಪ್ರಾಣೀ ಯಾವದ್ಭೇಷಜಮತ್ತಿಚ|
ತಾವಚ್ಚಿಕಿತ್ಸಾಕರ್ತವ್ಯಾದೈವಸ್ಯ ಕುಟಿಲಾಗತಿಃ||

ಔಷಧಗಳನ್ನು ತೆಗೆದುಕೊಳ್ಳುವುದಲ್ಲದೆ, ಆಯಾಯ ರೋಗಕ್ಕೆ ತಕ್ಕ ಪಥ್ಯವನ್ನೂ ಮಾಡಲೇಬೇಕು. ಬಹು ಕಾಲದ ವ್ಯಾಧಿಗಳೂ ಕಠಿಣ ರೋಗಗಳೂ ಪಥ್ಯವನ್ನು ಮಾಡದಿದ್ದರೆ ಗುಣವಾಗುವುದಿಲ್ಲವು.

ಶ್ಲೋ|| ಔಷಧೇನವಿನಾವ್ಯಾಧಿಃ ಪಥ್ಯಾಭ್ಯಾಸೇನ ಜೀರ್ಯತೇ|
ನತುಪಥ್ಯವಿಹೀನಸ್ಯ ಭೇಷಜಾನಾಂಶತೈರಪಿ | ಪಥ್ಯಂದೇ
ಯಂಯಥಾಸಾತ್ಮ್ಯಂತಸ್ಮಾತ್ ಪಥ್ಯಂಸಮಾಚರೇತ್ ||

ಒಂದುವೇಳೆ ಔಷಧ ಸೇವನೆಯಿಲ್ಲದೆ ವೈದ್ಯದ್ರವ್ಯ ಗುಣಕಲ್ಪಗಳಲ್ಲಿ ಹೇಳಿರುವಂತೆ ಪಥ್ಯವನ್ನೇ ಮಾಡುತ್ತಿದ್ದರೆ ರೋಗವು ಜೀರ್ಣಿಸಿ ಆರೋಗ್ಯವಾಗುತ್ತದೆ. ಪಥ್ಯವನ್ನು ಮಾಡದೆ ನೂರಾರು ಔಷಧವನ್ನು ಸೇವಿಸಿದರೂ ಗುಣವಾಗುವದೇ ಇಲ್ಲವು. ಆಯುರ್ವೇದ ಗ್ರಂಥಗಳಲ್ಲಿ

ಜ್ವರ, ಕ್ಷಯ, ಮೇಹ ಮುಂತಾದ ಒಂದೊಂದು ರೋಗಕ್ಕೂ ಬಿಡಬೇಕಾದ ಪದಾರ್ಥಗಳೂ, ತೆಗೆದು ಕೊಳ್ಳಬೇಕಾದ (ಪಥ್ಯ) ಪದಾರ್ಥಗಳೂ, ನಿರೂಪಿಸಲ್ಪಟ್ಟಿವೆ. ಪಥ್ಯವೆಂದರೆ:- ಗುಣದಲ್ಲಿ ಮೇಲಾಗಿಯೂ ಜೀರ್ಣಶಕ್ತಿಗೆ ತಕ್ಕುದಾಗಿಯೂ, ಹಿತಕರವಾಗಿಯೂ, ಪುಷ್ಟಿಕರವಾಗಿಯೂ ಇರುವ ಪದಾರ್ಥ ಸೇವನೆಯು , ಕಠಿಣವಾದ ವ್ಯಾಧಿಗಳಲ್ಲಿ ಬಿಡಬೇಕಾದ ಪದಾರ್ಥಗಳನ್ನು ಬಿಟ್ಟೇಬಿಡಬೇಕು. ಹಾಗೆ ಬಿಡದೆ ಅಪಥ್ಯ ಮಾಡಿದರೆ ಮೇಘಗಳ ಜಲಸಹಾಯದಿಂದ ಬಳ್ಳಿಗಳು ಹಬ್ಬಿ ಹರಡುವಂತೆ ಅಪಥ್ಯಪದಾರ್ಥಗಳ ಸೇವನೆಯಿಂದ ರೋಗಗಳು ಹಬ್ಬಿಬೆಳೆಯುತ್ತವೆ.

ಶ್ಲೋ ೧೦ ॥ ರೂಕ್ಷಂಸರ್ವಾಣ್ಯಪಥ್ಯಾನಿಯಥಾಸ್ವಂಪರಿವರ್ಜಯೇತ್ ।
ತಾನ್ಯಪಥ್ಯೈರ್ವಿವರ್ಧಂತೇತೋಯೈರ್ವಲ್ಲೀರುಹಃ ॥

ಎವಂಚ ಈ ಮೇಲೆ ತಿಳಿಸಿದಂತೆ ರೋಗಕ್ಕೆ ತಕ್ಕ ಕಾರಣಗಳನ್ನು ತಿಳಿದು, ತಕ್ಕ ಔಷಧವನ್ನೂ ಪಥ್ಯವನ್ನೂ, ಮಾಡಿದರೆ ಮೊಳಕೆಯ ಬೆಳೆವಿಕೆಗೆ ಕಾರಣವಾದ ನೀರು ಬತ್ತಿದರೆ ಮೊಳಕೆಗಳು ಸೀದು ಹೋಗುವಂತೆ ರೋಗಗಳು ನಾಶವಾಗುತ್ತವೆ. ಭಾವಪ್ರಕಾಶವೆಂಬ ಗ್ರಂಥದಲ್ಲಿ ಈವಿಷಯವು ಪ್ರಸಿದ್ಧವಾಗಿದೆ.

ಶ್ಲೋ ೧೧॥ ನಿದಾನೌಷಧಪಥ್ಯಾನಿತ್ರೀಣಿಯತ್ನೇನಚಿಂತಯೇತ್ ।
ತೇನೈವರೋಗಾಕ್ಷೀಯಂತೇಶುಷ್ಕೇನೀರಇವಾಂಕುರಾಃ ॥

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪದ, ಶೃಂಗೇರಿ.

ವೈದ್ಯಶಾಸ್ತ್ರವನ್ನು ಓದಿ ಅದರಂತೆ ನಡೆದರೆ ಪ್ರಬಲ ವ್ಯಾಧಿಗಳಿಂದ ತಪ್ಪಿಸಿಕೊಳ್ಳಬಹುದು. ಆದುದರಿಂದ ಈ ವೈದ್ಯಶಾಸ್ತ್ರವನ್ನು ಜ್ಯೋತಿಷಾದಿ ಇತರ ಶಾಸ್ತ್ರಗಳ ಅಧ್ಯಯನಕ್ಕಿಂತಲೂ ಮೊದಲು ಅಭ್ಯಾಸಮಾಡಬೇಕೆಂದೂ, ಈ ಆಯುರ್ವೇದವು ಋಗ್ವೇದದ ಉಪವೇದವಾದುದರಿಂದ ಈವೈದ್ಯಶಾಸ್ತ್ರಾಧ್ಯಯನವು ಪ್ರಶಸ್ತವೆಂದೂ, ಬಾಹಟ ಮತವು.

ಶ್ಲೋ|| ಕಿಂತ್ವೈಶ್ಯಾಸ್ತ್ರೈರಧೀತೈಸ್ತುಜ್ಯೋತಿಶ್ಯಲ್ಪನಯಾದಿ
ಭಿಃ | ವ್ಯೈವ್ಯಾರ್ಥಧರ್ಮಃ ಕ್ಲೇಶಮಯಾಃಪ್ರಶಮಯಾಂತಿ
ನೋಬುಧಾಃ | ತದೇತಚ್ಛಾಸ್ತ್ರಮಾರೋಗ್ಯಮಧ್ಯೇತ
ವ್ಯಂಪ್ರಯತ್ನತಃ ||

ಈ ಆಯುರ್ವೇದದಲ್ಲಿ ಚಿಕಿತ್ಸೆಯು ೮ ಪ್ರಕಾರವಾಗಿದೆ. ೧ ಶಲ್ಯ, ೨ ಶಾಲ್ಯಕ, ೩ ಕಾಯಚಿಕಿತ್ಸೆ, ೪ ಭೂತವೈದ್ಯ ೫ ಕುಮಾರಭೃತ್ಯ, ೬ ಅಗರ, ೭ ರಸಾಯನ, ೮ ವಾಜೀಕರಣ, ಈಚಿಕಿತ್ಸೆಗಳಲ್ಲಿ ಈಗ ಕಾಯ, ಕುಮಾರಭೃತ್ಯ, ವಾಜೀಕರಣ, ಅಗರ ಚಿಕಿತ್ಸೆಗಳು ಮಾಡಿಕೆಯಲ್ಲಿವೆ. ಶಲ್ಯವೆಂಬ ಚಿಕಿತ್ಸೆಯೇ ಶಸ್ತ್ರವೈದ್ಯವು. ಈಶಸ್ತ್ರ ಚಿಕಿತ್ಸೆಯು ಆಂಗ್ಲೇಯರಲ್ಲಿ ಈಗ ಅಧಿಕವಾಗಿದ್ದರೂ ಪೂರ್ವದಲ್ಲಿ ಈ ಶಸ್ತ್ರಚಿಕಿತ್ಸೆಯಲ್ಲಿ ಹಿಂದುಗಳಿಗೆ ಯಾರೂ ಎದುರಿರಲಿಲ್ಲ.

ವ್ರಣಕ್ಕೆ ಪಿಷ್ಟ (ಪ್ರೋಲ್ಟಿಸ್)ಕಟ್ಟಿಸೋದಿ, ಅಸಾಧ್ಯವಾದವ ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತಿದ್ದರು. ನೂತನವಾಗಿ ಕಣ್ಣುಗಳನ್ನೂ, ಕಿವಿಗಳನ್ನೂ ಕಲ್ಪಿಸುತ್ತಿದ್ದರು. ಹಿಂದು ಸಳು ಚಿಕಿತ್ಸೆ ಮಾಡಲು ಆರಿಸಿಕೊಂಡಿದ್ದ ಮುಚುಂಡೀ, ತಾಲಯಂತ್ರ ಶಲಾಕಾ ಮೊದಲಾದ ೨೪ ಯಂತ್ರಗಳನ್ನು ಛೇದಕವಾದ ವೃದ್ಧಿಪತ್ರ, ಸರ್ಪವಕ್ತ್ರ, ಸೂಚೀಶಸ್ತ್ರ ಮುಂತಾದ ೨೦ ಶಸ್ತ್ರಗಳನ್ನೂ ಸಲಕ್ಷಣವಾಗಿ ವಾಗ್ಭಟ ಮದನ ಪಾಲ, ಮುಂತಾದವರು ನಿರೂಪಿಸಿದ್ದಾರೆ. ಈ ಚಿಕಿತ್ಸೆಯು ಅಥರ್ವಣ ವೇದದಲ್ಲಿಯೂ ಹೇಳಲ್ಪಟ್ಟಿದೆ. ಈಗ ಆಂಗ್ಲೇಯರು ದ್ರಾವಕಗಳನ್ನು ಮಾಡುವರಷ್ಟೆ. ಅರ್ಕ ಪ್ರಕಾಶವೆಂಬ [ರಾವಣನು ಗರ್ಭಿಣಿಯಾದ ಮಂಡೋದರಿಗೆ ಹೇಳಿದುದು] ಗ್ರಂಥದಲ್ಲಿ ದ್ರಾವಕ [ಧೃತಿಗಳು] ಮಾಡುನಿಕೆಯ ರೀತಿಯು ಉಕ್ತವಾಗಿದೆ. ೨೦೦-೩೦೦ ವರ್ಷಗಳ ಈಚೆಗೆ ಈ ಚಿಕಿತ್ಸೆಗಳೂ, ರಚನೆಗಳೂ, ನಾಮಮಾತ್ರ ಶೇಷವಾದುವೆಂದು ಹೇಳಬಹುದು. ಔಷಧಗಳನ್ನು ಸಿದ್ಧಮಾಡುವ ಭೂಧರ, ವಿದ್ಯಾಧರ, ತಾಲ, ವಾಲುಕಾದಿ ಯಂತ್ರಗಳು ಈಗಲೂ ವಾಡಿಕೆಯಲ್ಲಿವೆ. ವೈದ್ಯನು ಶಾಸ್ತ್ರಜ್ಞನಾಗಿಯೂ, ವೈದಿಕಾಚಾರಸಂಪನ್ನನಾಗಿಯೂ, ದಯಾಳುವಾಗಿಯೂ ಇರಬೇಕು. ಶಾಸ್ತ್ರ

ಜ್ಞಾನಲ್ಲದೆ ಚಿಕಿತ್ಸೆ ಮಾಡುವವನನ್ನು ಬ್ರಹ್ಮಘಾತುಕನೆನ್ನುತ್ತಾರೆ.

ಶ್ಲೋ॥ ವಿನಾಶಾಸ್ತ್ರೇಣ ಯೋಬ್ರೂಯಾತ್ತಾಮಾಹುರ್ಬ್ರಹ್ಮಘಾತಕಂ ॥ (ಯೋಗರತ್ನಾಕರ)

ವೈದ್ಯಶಾಸ್ತ್ರವನ್ನು ತಿಳಿಯದವನಿಂದ ಚಿಕಿತ್ಸೆ ಮಾಡಿಸಿದರೆ ಮನಸ್ವಿಯಾಗುತ್ತೆ.

ಶ್ಲೋ॥ ಯಸ್ಯಕಸ್ಯತರೋರ್ಮೂಲಂಯೇನ ಕೇನಾಪಿಮಿಶ್ರಿತಂ ॥
ಯಸ್ಮೈಕಸ್ಮೈಪ್ರದಾತವ್ಯಂಯದ್ವಾತದ್ವಾಭವಿಷ್ಯತಿ ॥

ಆದುದರಿಂದ ವೈದ್ಯನು ಶಾಸ್ತ್ರಜ್ಞನಾಗಿರಬೇಕು. ಅನುಭವವೆಂದರೆ ಶಾಸ್ತ್ರಜನ್ಯಜ್ಞಾನವು. [ಶಾಸ್ತ್ರವನ್ನು ಓದಿ ದೃಢವಾಗಿ ಉಂಟಾದ ತಿಳಿವಳಿಕೆ] ಇಂಥಾಶಾಸ್ತ್ರಜನ್ಯಜ್ಞಾನವಿಲ್ಲದೆ ೪-೬ ಔಷಧವನ್ನು ಕೇಳಿ ತಿಳಿದುದೇ ಅನುಭವವೆಂದು ಕೆಲವರು ಭಾವಿಸಿರುವರು. ಇದು ತಪ್ಪು. ಶಾಸ್ತ್ರತಿಳಿಯದಿದ್ದರೆ ಪ್ರಕೃತಿಜ್ಞಾನವೂ, ಋತುದೇಶಗುಣಭೇದಜ್ಞಾನವೂ, ಪರಿಭಾಷಾ ಶಾರೀರರಚನಾಸ್ಥಿತಿ ಪರಿಜ್ಞಾನವೂ, ಪದಾರ್ಥಗಳ ಶತ್ರುಮಿತ್ರವರ್ಗಜ್ಞಾನವೂ, ಆಗುವದಿಲ್ಲವು. ೧೦-೧೨ ಮೂಲಿಕೆಗಳ ಸ್ವರೂಪ ಗುಣತಾರತಮ್ಯಗಳನ್ನು ತಿಳಿದು ಜ್ಞಾಪಕದಲ್ಲಿಡುವುದು ದುರ್ಘಟವು. ಹೀಗಿರುವಾಗ ಅಪಾರವಾದ ಔಷಧದ್ರವ್ಯಾದಿಗಳ ಗುಣದೋಷ ತಾರತಮ

ಜ್ಞಾನವು ಹೇಗೆ ಹುಟ್ಟೀತು ? ಸಾಧ್ಯಾಸಾಧ್ಯವಿವೇಕ, ನಿದಾನ ಪೂರ್ವರೂಪಾದಿವಿವರಣಜ್ಞಾನ, ಪ್ರಕೃತಿ ವಿಕೃತಿಗೆ ಅನುಗುಣವಾಗಿ ದ್ರವ್ಯಯೋಜನ ಮುಂತಾದುವುಗಳು ಶಾಸ್ತ್ರಜನ್ಯಜ್ಞಾನವಿಲ್ಲದೆ ಯಾವಕಾಲಕ್ಕೂ ತಿಳಿಯುವದೇ ಇಲ್ಲ. ನಾವು ಆಂಗ್ಲೇಯ ವೈದ್ಯರಂತೆ ಶಾಸ್ತ್ರವನ್ನು ಓದಿ ಪಾರಂಗತರಾಗಿ ಚಿಕಿತ್ಸೆಮಾಡಬೇಕು. ಶಾಸ್ತ್ರಜನ್ಯಜ್ಞಾನವಿಲ್ಲದವೈದ್ಯರನ್ನು ನಮ್ಮ ವೈದ್ಯಮಹರ್ಷಿಗಳ ಕೀರ್ತಿಗೆ ದ್ವೇಷಿಗಳೆಂದು ವೃಂದ ಮಾಧವ ಮುಂತಾದ ವೈದ್ಯರತ್ನರು ದೂಷಿಸುತ್ತಾರೆ.

ಆರ್ಯಮಹಾಶಯರೇ !

ನಮ್ಮ ಆರ್ಯವೈದ್ಯ ವಿಚಾರೋಪನ್ಯಾಸವು ಅಪಾರವಾಗಿದೆ. ನಮ್ಮ ಪೂರ್ವಿಕರು ಇದರಂತೆನಡೆಯುತ್ತಿದ್ದುದರಿಂದಲೇ ದೃಢಕಾಯರಾಗಿಯೂ ಚಿರಜೀವಿಗಳಾಗಿಯೂ, ಇದ್ದರೆಂಬುವುದು ದೃಢವಾಯಿತು. ಸದ್ಯದಲ್ಲಿಯೇ ಆರ್ಯ ಆಯುರ್ವೈದ್ಯದ ಸೂತ್ರಗಳನ್ನು ವಿಶದಪಡಿಸಬೇಕೆಂಬ ಕೋರಿಕೆಯಿದೆ. ಪ್ರೇಕ್ಷಕಮಹಾಶಯರೇ ! ಇದನ್ನು ಓದಿ ಈ ಆರ್ಯವೈದ್ಯವನ್ನು ಪುರಸ್ಕರಿಸಿ ಪ್ರೋತ್ಸಾಹವನ್ನುಂಟು ಮಾಡಬೇಕಾಗಿ ಪ್ರಾರ್ಥಿಸುವೆನು.

ಕೆ. ಶೇಷಶಾಸ್ತ್ರೀ,
ಆರ್ಯಭಿಷಕ್ಪ್ರಾದ, ಶೃಂಗೇರಿ, ಮೈಸೂರು ಪ್ರಾವಿನ್ಸ್.

ಜ್ಞಾನವು ಹೇಗೆಹುಟ್ಟೀತು? ಸಾಧ್ಯಾಸಾಧ್ಯವಿವೇಕ, ನಿದಾನ ಪೂರ್ವರೂಪಾದಿಪರಿಜ್ಞಾನ, ಪ್ರಕೃತಿ ವಿಕೃತಿಗೆ ಅನುಗುಣವಾಗಿ ದ್ರವ್ಯ ವೇಳನ ಮುಂತಾದುವುಗಳು ಶಾಸ್ತ್ರಜನ್ಯಜ್ಞಾನವಿಲ್ಲದೆ ಯಾವಕಾಲಕ್ಕೂ ತಿಳಿಯುವದೇ ಇಲ್ಲ. ನಾವು ಆಂಗ್ಲೇಯ ವೈದ್ಯರಂತೆ ಶಾಸ್ತ್ರವನ್ನು ಓದಿ ಪಾರಂಗತರಾಗಿ ಚಿಕಿತ್ಸೆಮಾಡಬೇಕು. ಶಾಸ್ತ್ರಜನ್ಯಜ್ಞಾನವಿಲ್ಲದವೈದ್ಯರನ್ನು ನಮ್ಮ ವೈದ್ಯಮಹರ್ಷಿಗಳ ಕೀರ್ತಿಗೆ ದ್ವೇಷಿಗಳೆಂದು ವೃಂದ ಮಾಧವ ಮುಂತಾದ ವೈದ್ಯರತ್ನರು ದೂಷಿಸುತ್ತಾರೆ.

ಆರ್ಯಮಹಾಶಯರೇ!

ನಮ್ಮ ಆರ್ಯವೈದ್ಯ ವಿಚಾರೋಪನ್ಯಾಸವು ಅಪಾರವಾಗಿದೆ. ನಮ್ಮ ಪೂರ್ವಿಕರು ಇದರಂತೆನಡೆಯುತ್ತಿದ್ದುದರಿಂದಲೇ ದೃಢಕಾಯರಾಗಿಯೂ ಚಿರಜೀವಿಗಳಾಗಿಯೂ, ಇದ್ದರೆಂಬುವುದು ದೃಢವಾಯಿತು. ಸದ್ಯದಲ್ಲಿಯೇ ಆರ್ಯ ಆಯುರ್ವೈದ್ಯದ ಸೂತ್ರಗಳನ್ನು ವಿಶದಪಡಿಸಬೇಕೆಂಬ ಕೋರಿಕೆಯಿದೆ. ಪ್ರೇಕ್ಷಮಹಾಶಯರೇ! ಇದನ್ನು ಓದಿ ಈ ಆರ್ಯವೈದ್ಯವನ್ನು ಪುರಸ್ಕರಿಸಿ ಪ್ರೋತ್ಸಾಹವನ್ನುಂಟು ಮಾಡಬೇಕಾಗಿ ಪ್ರಾರ್ಥಿಸುವೆನು.

ಕೆ. ಶೇಷಶಾಸ್ತ್ರೀ,

ಆರ್ಯಭಿಷಕ್ಪಾದ, ಶೃಂಗೇರಿ, ಮೈಸೂರು ಪ್ರಾವಿನ್ಸು.

ಕೆ. ಶೇಷಶಾಸ್ತ್ರೀ, ಆರ್ಯಭಿಷಕ್ಪಾದ, ಶೃಂಗೇರಿ.

ಶ್ರೀಃ

ವಿಜಯತಾಂ ಭಗವಾನ್ ಲಕ್ಷ್ಮೀನೃಸಿಂಹಃ

ಶ್ರೀ ಮೃತ್ಯುಂಜಯಃ

ಶ್ರೀಗಣೇಶಃ.

* ಆಯುರ್ಭೈಷಜ್ಯಮಂದಿರಂ *

ಶೃಂಗಗಿರಿ.

ತ್ವರೆಮಾಡಿ !　　　　ತ್ವರೆಮಾಡಿ !!

ಶಾಸ್ತ್ರೀಯೌಷಧಗಳು.

1. ನವಾನಂದ ಭೈರವ ರಸಃ (ರಸ ಎಂದರೆ ಮಾತ್ರೆ) ೫೦ಕ್ಕೆ ರೂ. ೧—೦—೦.

೮ ವಿಧ ಜ್ವರಗಳು, ಸನ್ನಿಪಾತಗಳು, ೧, ೨, ೩, ೪ ದಿನಕ್ಕೆ ಬರುವ ಜ್ವರಗಳು, ಕೆಮ್ಮು, ಉಬ್ಬಸ, ಕ್ಷಯ, ಗುಲ್ಮ, ಪ್ರಮೇಹ, ಅಸಾಧ್ಯಭೇದಿ, ಆಮಶಂಕೆ, ಅತಿಸಾರ, ಈ ರೋಗಗಳನ್ನು ನಿರ್ಮೂಲ ಮಾಡುತ್ತದೆ. ಚಳಿ ಜ್ವರ ಮುಂತಾದ ಜ್ವರಗಳನ್ನು ನಿಶ್ಶೇಷಮಾಡುವದಲ್ಲದೆ ಶಕ್ತಿಯನ್ನೂ ಕೊಡುತ್ತದೆ. ಕೆಟ್ಟದಾದ ಮಲೆನಾಡಿನಜ್ವರಕ್ಕೆ ಸಂಜೀ

ಸಿ. ಮಳೆಗಾಲದ ಕೆಲಸಗಾರರು ಈ ಔಷಧವನ್ನು ಉಪಯೋಗಿಸುತ್ತಾ ಕೆಲಸವನ್ನು ಯಾವಾಗಲೂ ಮಾಡಬಹುದು. ಸುಗ್ಗಿನಕಾಲದಲ್ಲಿಯೂ, ಶೀತಕಾಲದಲ್ಲಿಯೂ, ಅತ್ಯಾವಶ್ಯಕವಾದುದು. ನೇತ್ರಾಂಜನವಾಗಿ ಉಪಯೋಗಿಸಬಹುದು. ಪಟ್ಟಾಗಿ ಸಿಫಾರ್ಸನ್ನು ಪಡೆದಿದೆ.

ಶ್ಲೋ|| ಕಾಸೇಶ್ವಾಸೇಕ್ಷಯೇ ಗುಲ್ಮೇಪ್ರಮೇಹೇವಿಷಮಜ್ವರೇ |
ಗ್ರಹಣ್ಯಾಂಕಷ್ಟರೋಗೇಷುದುರ್ಜ್ವರೇಸನ್ನಿಪಾತಕೇ ||

2. (೧) ಪ್ಲೀಹಾಂತ್ರಕ ಚೂರ್ಣ (ಜ್ವರಗಡ್ಡೆಗೆ) ೧. ಡಬ್ಬಿ ರೂ ೦—೧೨—೦

(೨) ಪ್ಲೀಹೋದರಾರಿರಸ ೨೫ ಮಾತ್ರೆ ರೂ. ೧-೦-೦.

ಛಳಿಜ್ವರದಿಂದ ಅಥವಾ ಇತರ ಜ್ವರದಿಂದ ರಕ್ತವು ಸೇರಿ ಗಟ್ಟಿಯಾಗಿ ಆ ಪ್ಲೀಹವು ಎಂದರೆ ಕಿಬ್ಬೊಟ್ಟೆಯು ಎಡಕ್ಕೆ ಬಾಯುವುದು. ಇದೇ ಜ್ವರ ಗಡ್ಡೆಯು (ಪ್ಲೀಹೋದರ). ಇದರಿಂದ ಕ್ರಮೇಣ ಉಬ್ಬಸ, ಅಗ್ನಿಮಾಂದ್ಯ ಉಂಟಾಗಿ ಭಯಂಕರವಾಗುತ್ತದೆ. ಈ ಚೂರ್ಣ ಮತ್ತು ಮಾತ್ರೆಯನ್ನು ನಾವು ತಿಳಿಸುವ ಅನುಪಾನದಂತೆ ಬಿಡದೆ ಸೇವಿಸಿದರೆ ಎಲ್ಲಾ ಜ್ವರಗಡ್ಡೆಗಳೂ ನಿರ್ಮೂಲವಾಗುತ್ತವೆ. ಉಬ್ಬಸ, ಭೇದಿ, ಮಕ್ಕಳ ಅತಿಸಾರ, ಕಮ್ಮಕೆಂಕೆ, ಅಜೀರ್ಣಗಳು ಪರಿಹೃತವಾಗುತ್ತವೆ.

ಕೆ. ಸೀತಾರಾಮಶಾಸ್ತ್ರೀ, ಆಯುರ್ವೇದಶಾಸ್ತ್ರದ, ಶೃಂಗೇರಿ.

ಶ್ಲೋ॥ ಪ್ಲೀಹೋದರಾರಿದುರ್ನಾಮ್ನಾಶ್ಯಂಹಂತಿ ಪ್ಲೀಹಂಚಿರಂತನಂ॥

3. (೧) ಬಡಬಾನಲ ಚೂರ್ಣ. ೧ ಡಬ್ಬಿ ರೂ. ೧—೦—೦

(೨) ಅನ್ನ ಭಸ್ಮ. ೩ ತೊಲ ರೂ. ೧—೦—೦

ಅಜೀರ್ಣ, ಹೊಟ್ಟೆಯುಬ್ಬರ, ಜೀರ್ಣಶಕ್ತಿ ಕಟ್ಟಿರುವುದು, ಎದೆ ಉರಿ, ಹುಳಿತೇಗು, ಭೇದಿ, ವಾಂತಿ, ಹೊಟ್ಟೆ ಶೂಲೆ, ಮೈ ನೋವು, ಸೋಮಾರಿತನ, ಸುಸ್ತು, ಶಿರೋಭ್ರಮಣೆ, ದೃಷ್ಟಿಮಾಂದ್ಯ, ನಾಡಿಗಳ ಕ್ಷೀಣತೆ ಇವನ್ನು ಪರಿಹರಿಸಿ ಜೀರ್ಣಶಕ್ತಿಯನ್ನುಂಟು ಮಾಡುವುದು.

4. ಅಮೃತಾಮಳಕ ತೈಲ. ಶೀಸೆ ೧ಕ್ಕೆ ೧-೦-೦

ಉಷ್ಣದಿಂದ ನಿದ್ರೆ ಬಾರದಿರುವುದು, ಕಣ್ಣುರಿ, ಮನಸ್ಸಿನ ಜುಗುಪ್ಸೆ, ಪಿತ್ತೋದ್ರೇಕದಿಂದಾದ ಅಶಕ್ತಿ, ಬಳಲಿಕೆ, ತಲೆನೋವು ಮುಂತಾದ ಶಿರೋರೋಗ, ಇವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ, ಬುದ್ಧಿಗೆ ವಿಕಾಸವನ್ನೂ, ಉತ್ಸಾಹವನ್ನೂ ಕೊಡುತ್ತದೆ. ಕೂತು ಕೆಲಸ ಮಾಡುವ ಸರ್ಕಾರಿ ನೌಕರರು ಮುಂತಾದವರಿಗೆ ಬಹೂಪಯುಕ್ತವು.

5. ಕೇಶವರ್ಧಿನೀ ತೈಲ. ಶೀಸೆ ೧ಕ್ಕೆ ೦-೧೨-೦

ದರ್ಭೆ ಹೂವಿನಂತೆ ಬೆಳ್ಳಗಿರುವ ಕೂದಲನ್ನು- ಭ್ರಮರ

ವಿನಿ. ಮಳೆಗಾಲದ ಕೆಲಸಗಾರರು ಈ ಔಷಧವನ್ನು ಪಯೋಗಿಸುತ್ತಾ ಕೆಲಸವನ್ನು ಯಾವಾಗಲೂ ಮಾಡಬಹುದು. ಬ್ಸೇಗಿನಕಾಲದಲ್ಲಿಯೂ, ಶೀತಕಾಲದಲ್ಲಿಯೂ, ಅತ್ಯಾವಶ್ಯಕವಾದುದು. ನೇತ್ರಾಂಜನವಾಗಿ ಉಪಯೋಗಿಸಬಹುದು. ಹೆಚ್ಚಾಗಿ ಸಿಫಾರ್ಸನ್ನು ಪಡೆದಿದೆ.

ಶ್ಲೋ॥ ಕಾಸೇಶ್ವಾಸೇಕ್ಷಯೇ ಗುಲ್ಮೇಪ್ರಮೇಹೇವಿಷಮಜ್ವರೇ।
ಗ್ರಹಣ್ಯಾಂಶಪ್ತದೋಷೇಷುದುಜ್ವರೇಶನ್ನಿಪಾತಕೇ॥

2. (೧) ಪ್ಲೀಹಾಂತ್ರಕ ಚೂರ್ಣ (ಜ್ವರ ಗಡ್ಡೆಗೆ) ೧. ಡಬ್ಬಿ ರೂ ೦—೧೨—೦

(೨)ಪ್ಲೀಹೋದರಾರಿರಸ ೨೫ವಾತ್ರೆ ರೂ. ೧-೦-೦.

ಛಳಿಜ್ವರದಿಂದ ಅಥವಾ ಇತರ ಜ್ವರದಿಂದ ರಕ್ತವು ಹೀರಿ ಗಟ್ಟಿಯಾಗಿ ಆ ಪ್ಲೀಹವು ಎಂದರೆ ಕಿಬ್ಬೊಟ್ಟೆಯು ಎಡಕ್ಕೆ ಬಾಯುವುದು. ಇದೇ ಜ್ವರ ಗಡ್ಡೆಯು (ಪ್ಲೀಹೋದರ). ಇದರಿಂದ ಕ್ರಮೇಣ ಉಬ್ಬಸ, ಅಗ್ನಿಮಾಂದ್ಯ ಉಂಟಾಗಿ ಭಯಂಕರವಾಗುತ್ತದೆ. ಈ ಚೂರ್ಣ ಮತ್ತು ಮಾತ್ರೆಯನ್ನು ನಾವು ತಿಳಿಸುವ ಅನುಪಾನದಂತೆ ಬಿಡದೆ ಸೇವಿಸಿದರೆ ಎಲ್ಲಾ ಜ್ವರಗಡ್ಡೆಗಳೂ ನಿರ್ಮೂಲವಾಗುತ್ತವೆ. ಉಬ್ಬಸ, ಭೇದಿ, ಮಕ್ಕಳ ಅತಿಸಾರ, ಆಮಶಂಕೆ, ಅಜೀರ್ಣಗಳು ಪರಿಹೃತವಾಗುತ್ತವೆ.

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪಾದ, ಶೃಂಗೇರಿ.

ಶ್ಲೋ॥ ಪ್ಲೀಹೋದರಾರಿದುರ್ನಸ್ತಾಗ್ನಿರ್ಘಹಂತಿ ಪ್ಲೀಹಂಚಿರಂ ತನಂ॥

3. (೧) ಬಡಬಾನಲ ಚೂರ್ಣ. ೧ ಡಬ್ಬಿ ರೂ. ೧—೦—೦

(೨) ಅನ್ನ ಭಸ್ಮ. ೩ ತೊಲ ರೂ. ೧—೦—೦

ಅಜೀರ್ಣ, ಹೊಟ್ಟೆಯುಬ್ಬರ, ಜೀರ್ಣಶಕ್ತಿ ಕಟ್ಟಿರುವುದು, ಎದೆ ಉರಿ, ಹುಳಿತೇಗು, ಭೇದಿ, ವಾಂತಿ, ಹೊಟ್ಟೆ ಶೂಲೆ, ಮೈ ನೋವು, ಸೋಮಾರಿತನ, ಸುಸ್ತು, ಶಿರೋ ಭ್ರಮಣೆ, ದೃಷ್ಟಿಮಾಂದ್ಯ, ನಾಡಿಗಳ ಕ್ಷೀಣತೆ ಇವನ್ನು ಪರಿಹರಿಸಿ ಜೀರ್ಣಶಕ್ತಿಯನ್ನುಂಟು ಮಾಡುವುದು.

4. ಅಮೃತಾಮಲಕ ತೈಲ. ಶೀಸೆ ೧ಕ್ಕೆ ೨-೦-೦

ಉಷ್ಣದಿಂದ ನಿದ್ರೆ ಬಾರದಿರುವುದು, ಕಣ್ಣುರಿ, ಮನಸ್ಸಿನ ಜಾಗ್ರತೆ, ಪಿತ್ತೋದ್ರೇಕದಿಂದಾದ ಅಶಕ್ತಿ, ಬಳಲಿಕೆ, ತಲೆ ನೋವು ಮುಂತಾದ ಶಿರೋರೋಗ, ಇವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ, ಬುದ್ಧಿಗೆ ವಿಕಾಸವನ್ನೂ, ಉತ್ಸಾಹವನ್ನೂ ಕೊಡುತ್ತದೆ. ಕೂತು ಕೆಲಸ ಮಾಡುವ ಸರ್ಕಾರಿ ನೌಕರರು ಮುಂತಾದವರಿಗೆ ಬಹೂಪಯುಕ್ತವು.

5. ಕೇಶವರ್ಧಿನೀ ತೈಲ. ಶೀಸೆ ೧ಕ್ಕೆ ೦-೧೨-೦

ದರ್ಭೆ ಹೂವಿನಂತೆ ಬೆಳ್ಳಗಿರುವ ಕೂದಲನ್ನು ಭ್ರಮರ

ದಂತೆ ಕಪ್ಪಗೆ ಮಾಡುತ್ತದೆ. ರೋಮ ಕೂಪವನ್ನು ಚೆನ್ನಾಗಿ ಬೆಳಿಸುತ್ತದೆ.

ಶ್ಲೋ || ಕೇಶಾನ್‌ಕಾಶಪ್ರಕಾಶಾನ್ಕಲಿಕುಲಸದೃಶಾಜಾಯತೇರೋ
ಮಕೂಪಂ||

6. ಚಂದ್ರಚೂಡಪಾಕ. ೧ಸೇರು ರೂ. ೨-೮-೦

ಈ ಲೇಹವು ಪಾಂಡು, ಕ್ಷಯ, ಕಾಮಿಲೆ, ಬಲಕ್ಷಯ, ಧಾತುಕ್ಷಯ, ಮೂತ್ರಕೃಛ್ರ, ಮೂತ್ರರೋಗ, ಮೇಹ ಪಿತ್ತರೋಗ, ವಾತರೋಗ, ಪಿತ್ತದಿಂದಾದಮುಚ್ಛು, ದೇಹದ ಉಷ್ಣ, ಕೃಶತನ, ಕೈಕಾಲು ಕಣ್ಣುರಿ, ಮೂಲವ್ಯಾಧಿ; ಮಂದಾಗ್ನಿ, ಇವನ್ನು ಪರಿಹರಿಸಿ ಧಾತುವೃದ್ಧಿಯನ್ನೂ ಪುಷ್ಟಿಯನ್ನೂ ಉಂಟುಮಾಡುತ್ತದೆ.

ಶ್ಲೋ||ಪಾಂಡುಕ್ಷೀಣಬಲಕ್ಷಯಾಶ್ಮರಿರುಜಾಪಿತ್ತಾರ್ಶನಿರ್ನಾಶನಂ|
ಹಿಕ್ಕಾ ಕಾಮಿಲಮೂತ್ರಮೇಹಗದಹೃದ್ವೇಹೋಷ್ಣ ಮಂ
ದಾಗ್ನಿತಾ ಧಾತುಕ್ಷೀಣಹಗಂರಸಾಯನಮಿದಂಶ್ರೀಪೂಜ್ಯ
ಪಾದೋದಿತಂ||

7. ಚಂದ್ರ ಚೂಡಾಲ ಸಿಂದೂರ. ತೊಲ ಅರ್ಧಕ್ಕೆ. ರೂ. ೨—೦—೦

ಪುರುಷರಿಗೆ ಅತಿರೇಕಸ್ತ್ರೀಸಂಗದಿಂದಾಗಲಿ, ದುರ್ಭೋಗ ಗಳಿಂದಾಗಲಿ, ತನ್ನ ಶರೀರಕ್ಕೆಹಿತವಲ್ಲದತಿಂಡಿಯಿಂದಾಗಲೀ

ತಂದೆ ತಾಯಿಗಳ ರೋಗ ಅಥವಾ ಬೀಜದೋಷದಿಂದಾಗಲಿ ಕ್ರಮವಾದ ಬಾಲ್ಯಪೋಷಣೆಯಿಲ್ಲದಿರುವದರಿಂದಾಗಲಿ, ರಕ್ತದ ಕೊರತೆ ಅಥವಾ ಅಶಕ್ತಿಯಿಂದಾಗಲಿ, ಇಂದ್ರಿಯವು ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಮಾನಸಿಕ ಯತ್ನವಿಲ್ಲದೆ ಸ್ಖಲನವಾಗುವುದು. ಇಂದ್ರಿಯವು ಸ್ವಪ್ನದಲ್ಲಿ ಹೋಗುವುದು. ಈ ರೋಗವು ಅನೇಕ ಸಂಕಟಕರವಾದ ರೋಗಗಳಿಗೆ ಕಾರಣವಾಗುವುದಲ್ಲದೆ ಇಂದ್ರಿಯ ಚೇತನವೇ ನಷ್ಟವಾಗಿ ಶರೀರಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿ ಮಾಂದ್ಯ, ಮೈ ತಲೆ ಬೆನ್ನು ನೋವು, ದುಸ್ಸ್ವಪ್ನ, ಅರವು ಮರುವು ಹುಟ್ಟಿ ಕೊನೆಗೆ ಶರೀರದ ಮತ್ತು ಮನಸ್ಸಿನ ಚೇತನವೇ ಕುಂದಿ ಅಲ್ಪಾಯುಷ್ಯವೇ ರೋಗಿಯ ಗತಿಯಾಗುವುದು.

ಶ್ಲೋ॥ ಅಗ್ನಿಮೂಲಂಬಲಂಪುಂಸಾಂರೇತೋಮೂಲಂತುಜೀವಿತಂ॥

ಮನುಷ್ಯನ ಶಕ್ತಿಗೆ ಅಗ್ನಿಬಲವೂ, ಬದುಕುವಿಕೆಗೆ ಧಾತು ಬಲವೂ ಕಾರಣವು. ಈ ಕೆಟ್ಟರೋಗವುಳ್ಳವರು ಉಪೇಕ್ಷೆಮಾಡದೆ (ಚಿಕ್ಕವರು ನಾಚದೆ ಅಂಜದೆ) ರೋಗವನ್ನು ಕಳೆದು ಕೊಳ್ಳಬೇಕು. ಆದುದರಿಂದ ನಾವು ತಿಳಿಸುವ ಅನುಪಾನದಂತೆ ಬಿಡದೆ ಸೇವಿಸುವ ಈ ಸಿಂದೂರದಿಂದ ಎಲ್ಲಾ

ಇಂದ್ರಿಯರೋಗವೂ, ದುರ್ಬಲವೂ ಶಾಂತಿಯಾಗಿ ಗುಣವಾಗುವುದು. ಕೆಲವರು ಶಕ್ತಿ ಬರಲೆಂದು ತರತರದ ಮದ್ಯಪಾನ ಮಾಡಿ ಇದ್ದ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಇದು ಸರಿಯಲ್ಲ. ಬಂಗಿ ಹಾಕಿ ಮಾಡಿದ (ಮದನಕಾಮೇಶ್ವರಿ) ಲೇಹವು ಅಫೀಮು ಮುಂತಾದುವು ಆ ಕಾಲಕ್ಕೆ ಸ್ವಲ್ಪ ಗುಣವನ್ನುಂಟು ಮಾಡಿದರೂ ಇವೆಲ್ಲಂದು ದುಸ್ತ್ಯಾಜ್ಯವಾದ ದುರಭ್ಯಾಸವಾಗಿ ಪರಿಣಮಿಸಿ ಸ್ವಾಭಾವಿಕ ಶಕ್ತಿಯನ್ನೇ ಕುಂದಿಸುವುವು. ಆದುದರಿಂದ ತೇಜೋವರ್ಧಕವಾದ, ಶರೀರಚೈತನ್ಯವನ್ನು ಬಲಪಡಿಸುವ ಈ ಸಿಂದೂರವು ಉತ್ತಮವಾದದ್ದು. ಈ ಸಿಂದೂರಗಳು ವಾಗ್ಭಟ ಮುಂತಾದ ಆಯುರ್ವೈದ್ಯರಿಗೆ ಅಭಿಮತವಾಗಿವೆ ಇದೇ ಉತ್ತಮವಾದ (ಟಾನಿಕ್) ತೇಜೋವರ್ಧಕವು.

೪. ಶೀತಾಂಶು ರಸ ೨೫ ಮಾತ್ರೆ ರೂ. ೧-೦-೦

ಶೀತಜ್ವರಾದಿ ಸರ್ವಜ್ವರ, ಸನ್ನಿಪಾತ, ಪಾಂಡು ಕಾಮಿಲೆ, ೫ ವಿಧ ಗುಲ್ಮ, ಎಲ್ಲಾ ಕೆಮ್ಮು, ಉಬ್ಬಸ, ಜಲೋದರ ಮಹೋದರಗಳೆರಡರ ಪೂರ್ವರೂಪ, ೧೩ ಬಗೆಯ ಸನ್ನಿಗಳು ೮೦ ವಿಧವಾಯುರೋಗ, ೨೮ ಪಿತ್ತರೋಗ, ನಾಭಿ

ಯಲ್ಲಿ ಗರ್ಭಿಣಿಯಿಂದಾಗುವ ಸುಣ್ಣ, ವಾಂತಿ, ಶೂಲೆ, ಪರಿಣಾಮ ಶೂಲೆ, ಹೊಟ್ಟೆಯುಬ್ಬರ, ಮಲಬಂಧ, ತಾಪ, ಎಲ್ಲಾ ಅವಯವಗಳ ಉರಿ, ಮೂಲಿಕೆ ಮತ್ತು ಪ್ರಾಣಿಗಳ ವಿಷ, ಬಿಕ್ಕಳಿಕೆ, ಅಗ್ನಿಮಾಂದ್ಯ, ಬಾವು, ಮೂರ್ಛೆ, ಆನೆಯಂತೆ ಚರ್ಮವುಳ್ಳ ರೋಗ, ಕುಷ್ಠ, ಗಂಟು, ದಂತ ನಾಲಿಗೆ ಕಣ್ಣು ಕಿವಿ ಇವುಗಳ ರೋಗ, ಅಪಸ್ಮಾರ, ಶಿರೋರೋಗ, ಧನುರ್ವಾತ, ಭೂತರೋಗ ಈ ದೊಡ್ಡ ದೊಡ್ಡ ರೋಗಗಳೇ ನಾಶವಾಗುವುವು. ಇತರ ರೋಗಗಳು ಈ ಔಷಧಕ್ಕೆ ತೃಣಸಮಾನವು. (ರೇವಣಸಿದ್ಧಭಾಷ್ಯದಲ್ಲಿ) "ಶೀತಜ್ವರಂ ಸನ್ನಿ ಪಾಂಡುಂ" ಎಂದು ಪ್ರಾರಂಭಿಸಿ "ಧನುರ್ವಾತಂತಥಾಭೂತಂ ಶೇಷೇರೋಗೇಚಕಾಕಥಾ" ಎಂತ ಪ್ರಶಸ್ತವಾಗಿದೆ.

9. ಮಹಾ ಭೃಂಗಾಮಲಕತೈಲ ೧ ಸೀಸೆ ೧-೦-೦

ತಲೆತಿರುಗು, ಕಾಮಾಲೆ, ಅಶಕ್ತಿ, ಹಳೇಜ್ವರ, ಕ್ಷಯ, ಪಿತ್ತವಿಕಾರ, ಮನೋವಿಕಾರ, ನೇತ್ರರೋಗ, ತಲೆನೋವು, ಇತರ ಶಿರೋರೋಗ ಇವುಗಳನ್ನು ಪರಿಹರಿಸಿ ದೇಹಕ್ಕೆ ಕಾಂತಿಯನ್ನೂ ಬುದ್ಧಿಗೆ ಸ್ಥೈರ್ಯವನ್ನೂ ಉಂಟು ಮಾಡುವುದಲ್ಲದೆ ಕಣ್ಣಿಗೆ ಬಲವನ್ನೂ ಕೊಡುತ್ತದೆ.

10. ಅಶ್ವಗಂಧಾವಲೇಹ ೧ ನೇ ನಂಬರ್ ಸೇರು ೧ ಕ್ಕೆ ರೂ. ೨—೦—೦

ಕೆಮ್ಮು, ಉಬ್ಬಸ, ವಾತರಕ್ತ, ಜ್ವರಗಡ್ಡೆ, ಆಮವಾಯು, ಹೊಟ್ಟೆನೋವು, ಮೂಲವ್ಯಾಧಿ, ಗುಲ್ಮ, ಪಾಂಡು, ಕಾಮಿಲೆ ವಾತಪಿತ್ತ ಕಫರೋಗ, ವಾಂತಿ ಇವನ್ನು ಗುಣಪಡಿಸುತ್ತದೆ. ಹೆಂಗಸರಿಗೂ, ಮಕ್ಕಳಿಗೂ, ಜೀರ್ಣಶಕ್ತಿಯಿಲ್ಲದವರಿಗೂ, ಅಶಕ್ತರಿಗೂ ಉತ್ತಮವಾದದ್ದು. ಮಕ್ಕಳ ಪುಷ್ಟಿಗೆ ತಕ್ಕುದಾಗಿದೆ.

11. ಅಶ್ವಗಂಧಾವ ಲೇಹ ೨ನೇ ನಂ. ೨-೪-೦

ಎಲ್ಲಾ ಬಗೆ ಮೇಹಗಳೂ, ಜೀರ್ಣಜ್ವರ, ವ್ರಣವಾಗಿರುವುದು, ಗುಲ್ಮ, ಪಿತ್ತರೋಗ, ವಾತರೋಗ ಇವನ್ನು ಹೋಗಲಾಡಿಸಿ ಧಾತುವೃದ್ಧಿಯನ್ನೂ, ಪುಷ್ಟಿಯನ್ನೂ, ಅಗ್ನಿ ಬಲವನ್ನೂ, ಕಾಂತಿಯನ್ನೂ, ಮನಸ್ಸಿಗೆ ಉಲ್ಲಾಸವನ್ನೂ ಉಂಟುಮಾಡುತ್ತದೆ.

ಶ್ಲೋ॥ ಪಕ್ತ್ವಾಶೀತಂಕಾರಯೇದಶ್ವಗಂಧಾಪಾಕೋಯಂವೈಹಂ
ತಿಮೇಹಾನಶೇಷಾನ್ ॥ ಜ್ವರಂಜೀರ್ಣಂಶೋಷಗುಲ್ಮಾನ್
ವಿಕಾರಾನ್ ಪಿತ್ತೋತ್ಥಾನ್ ವಾತಜಾನ್ ಶುಕ್ರವೃದ್ಧಿಂಕರೋತಿ।
ಪುಷ್ಟಿಂದದ್ಯಾದಗ್ನಿಸಂದೀಪನೋಯಂಕಾಂತಿಂಕುರ್ಯಾ
ತ್ ಸೌಮನಸ್ಯಂನರಾಣಾಂ ॥

---

12. ಯೋಗರಾಜ ಗುಗ್ಗುಲುಪಾಕ ೧ ಡಬ್ಬಿ

ರೂ. ೨—೦—೦

ಇದು ಪಿತ್ತ, ವಾಯು, ಕಫವೆಂಬ ಮೂರು ದೋಷಗಳನ್ನೂ ಹೊಡೆಯುತ್ತದೆ. ಇದನ್ನು ತೆಗೆದುಕೊಳ್ಳುವಾಗ ಮೈಥುನ, ಆಹಾರ, ಪಾನಾದಿಗಳನ್ನು ಬಿಡಬೇಕಾಗಿಲ್ಲ. ಎಲ್ಲಾ ವಾಯುರೋಗಗಳೂ, ಕುಷ್ಠ, ಮೂಲವ್ಯಾಧಿ, ಭೇದಿ ರೋಗ, ಪ್ರಮೇಹ, ವಾತರಕ್ತ, ಆಮಶೂಲೆ, ಭಗಂದರ, ಉದಾವರ್ತವಾಯು, ಕ್ಷಯ, ಗುಲ್ಮ, ಅಪಸ್ಮಾರ, ಕೈಕಾಲು ಎದೆ ಹಿಡಿವುದು, ಮಂದಾಗ್ನಿ, ಕೆಮ್ಮು, ಉಬ್ಬಸ, ಅರುಚಿ ಇವುಗಳನ್ನು ಪರಿಹರಿಸುತ್ತದೆ. ಯಂಥಾ ಅಸಾಧ್ಯ ವಾಯುರೋಗವನ್ನೂ ನಿರ್ನಾಮಮಾಡುತ್ತದೆ. ಪುರುಷರ ಧಾತುದೋಷವನ್ನೂ ಸ್ತ್ರೀಯರ ರಜೋದೋಷವನ್ನೂ ಪರಿಹರಿಸಿ ಸಂತಾನದಾಯಕವಾಗುತ್ತದೆ. ಶಾರಂಗಧರಾದಿ ಸರ್ವವೈದ್ಯ ಸಮ್ಮತವು.

ಶ್ಲೋ॥ ಗುಗ್ಗುಲುರ್ಯೋಗರಾಜೋಯಂ (ಎಂತಪ್ರಾರಂಭಿಸಿ) ರೇತೋ
ದೋಷಹರಃ ಪುಂಸಾಂ ರಜೋದೋಷಹರಸ್ತ್ರಿಯಾಂ ॥
ಪುಂಸಾಮಪತ್ಯಜನಕೋ ವಂಧ್ಯಾನಾಂ ಗರ್ಭದಸ್ತಥಾ ॥
ಎಂತ ಬಹು ಶ್ಲಾಘ್ಯವಾಗಿದೆ.

13. ಮಹಾಸುದರ್ಶನ ಚೂರ್ಣ ೧ ಡಬ್ಬಿ

ರೂ. ೨—೦—೦

ಈ ಮಹಾ ಸುದರ್ಶನಚೂರ್ಣವು ಎಲ್ಲಾ ವಿಧ ಜ್ವರ ೧. ೨. ೩. ೪. ೧೫. ೩೦ ದಿನಕ್ಕೆ ಬರುವ ಜ್ವರಗಳು ವಿಷಮ ಜ್ವರ, ಅಭಿಘಾತಜ್ವರ, ಧಾತುಗತ ಅಸ್ಥಿಗತ ಜ್ವರಗಳು, ಸಂಸರ್ಗಜ್ವರ, ಕಠಿಣಜ್ವರ, ಸಮಸ್ತ ಸನ್ನಿಪಾತಗಳು, ಜ್ವರಗಳು, ಶೀತ ಮತ್ತು ವಾತರೋಗ, ಮೂರ್ಛೆ, ಭ್ರಮೆ, ಸೋಮಾರಿತನ, ಕೆಮ್ಮು, ಉಬ್ಬಸ, ಅರುಚಿ, ಪಾಂಡು, ಕಾಮಿಲೆ, ಕೈಕಾಲುಸಂದುಶೂಲೆ, ವಾಯುಶೂಲೆ, ಪಾರ್ಶ್ವ ಶೂಲೆ, ಎಲ್ಲಾ ವಿಧ ಕೆಟ್ಟನೀರಿನ ದೋಷಗಳು, ಕೃತ್ರಿಮವಿಷ [ಎಂದರೆ ಹೆಂಗಸರು ತಿಂಡಿಯಲ್ಲಿ ಸೇರಿಸಿ ಕೊಡುವ ಮದ್ದು ಶತೃಗಳು ಹಾಕುವ ವಿಷ ಈ ಕೃತ್ರಿಮ ವಿಷವು ದೇಹದಲ್ಲಿ ಸೇರಿದರೆ ಮೈ ಬೆಳ್ಳಗೂ ಕೃಶವೂ ಆಗುತ್ತದೆ. ಅನ್ನವು ಅರ ಗುವುದಿಲ್ಲ. ಭೇದಿ, ಕ್ಷಯ, ಕೈಕಾಲು ಊದುವದು, ನಿದ್ರೆ ಸೋಮಾರಿತನ, ಇಂದ್ರಿಯನಷ್ಟ, ಮರ್ಮವೇದನೆ ಮುಂತಾ ದುವು ಉಂಟಾಗುತ್ತವೆ. ಈ ಮದ್ದನ್ನು (ಕೃತ್ರಿಮ ವಿಷ) ಕೆಟ್ಟ ಹೆಂಗಸರೇ ನಡಿಸುತಾರೆಂದು ಕಾಶ್ಯಪಸಂಹಿತೆ ಮುಂತಾದ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ.

ಕೈಮುಕಕೆಂಬ ಈ ಮದ್ದು ಹಾಕುವ ರೋಗವನ್ನೇ ದೂಷಿವಿಷವೆಂದೆನ್ನುತ್ತಾರೆ.] ಮುಂತಾದ ಎಲ್ಲಾ ವಿಷದೋ

ಷಗಳನ್ನೂ ಈ ಚೂರ್ಣವು ಪರಿಹರಿಸುತ್ತದೆ. (ಈ ಕ್ರಮ ಸಕಿಗೆ ಕೆಲವರು ಭೇದಿಗೂ, ವಾಂತಿಗೂ ಕೊಡುವರು. ಇದ ರಿಂದ ಪ್ರಮಾದವುಂಟು) ಈ ಚೂರ್ಣದಿಂದಲಾದರೋ ಕಾಲಪ್ರವೃತ್ತಿಯಾಗುತ್ತಾ, ರೋಗವು ನಿರ್ಮೂಲವಾಗು ತ್ತದೆ. ಹೆಚ್ಚು ಮಾತೇನು! ಭೇದಾದಿಪ್ರಕ್ಷೇತಮಹಾಸುದರ್ಶನ ಚೂರ್ಣವೇ ಇದು. ಸುದರ್ಶನ ಚಕ್ರವು ರಾಕ್ಷಸರನ್ನು ಕೊಲ್ಲುವಂತೆ ಈ ಚೂರ್ಣವು ಮೇಲಿನರೋಗಗಳನ್ನೆಲ್ಲಾ ಗೆಲ್ಲುತ್ತದೆ. ಖಾತ್ರಿಯಾದದ್ದು.

ಶ್ಲೋ॥ ನಾನಾಪ್ರದೇಶೋದ್ಭವವಾರಿದೋಷಾ‌ತ್ ದೂಷೀವಿಷಾದಿ ಪ್ರಭವಾ‌ತ್ ವಿಕಾರಾ‌ತ್ । (ಎಂತಪ್ರಾರಂಭಿಸಿ) ಸುದರ್ಶನಂ ದಾನವನಾಶನಂ ಯಥಾಸುದರ್ಶನಂ ರೋಗವಿನಾಶನಂ ತಥಾ॥ ಎಂತ ಬಹು ಶ್ಲಾಘ್ಯವಾಗಿದೆ.

14. ಮಹಾವ್ಯೋಷಾದಿ ಚೂರ್ಣ ೧ ಡಬ್ಬಿಗೆ ರೂ ೧—೦—೦.

ಈ ಚೂರ್ಣದ ಸೇವನೆಯಿಂದ, ಆಮ, ರಕ್ತ, ಆಮ ಶಂಕೆ, ಎಲ್ಲಾತರದ ಭೇದಿರೋಗಗಳು ಮಕ್ಕಳ ಭೇದಿ, ಹಳೇ ಅತಿಸಾರ, ಅಜೀರ್ಣ, ಹೊಟ್ಟೆಶೂಲೆ, ವಿಷೂಚಿ, ಇವು ಪರಿಹೃತವಾಗುತ್ತವೆ. ಯಾವತರಹೆ ಭೇದಿರೋಗ ವಾದರೂ ಗುಣವಾಗುತ್ತದೆ.

---

15. ವಕ್ತ್ರಾಭರಣಮಾತ್ರೆ ೧೦೦ಕ್ಕೆ ೦-೪-೧

ಗರ್ಮಿಯಿಂದ ನಾಲಗೆಯು ಒಡೆದಿರುವುದು, ದೊಗಲು ಬೊಕ್ಕಲಾಗಿರುವುದು, ಬಾಯಿಯು ದುರ್ಗಂಧ, ಹುಗಳು ಮುಂತಾದ ಬಾಯಿರೋಗಗಳನ್ನು ಗುಣಪಡಿಸಿ, ಬಾಯಿಯನ್ನು ಸುಗಂಧವಾಗಿಡುತ್ತದೆ. ಇದನ್ನು ತಾಂಬೂಲದೊಡನೆ ಉಪಯೋಗಿಸಬಹುದು. ಹೆಸರಿಗೆ ತಕ್ಕಂತೆ ಮುಖಕ್ಕೆ ಆಭರಣವಾಗಿದೆ.

16. ದಂತಪ್ರಕಾಶಕ ಚೂರ್ಣ ೧ಡಬ್ಬಿ ೦-೬-೦

ಈ ಚೂರ್ಣದಿಂದ ಹಲ್ಲನ್ನುಜ್ಜಿ ಬಾಯಿಯಲ್ಲಿಟ್ಟುಕೊಳ್ಳುವುದರಿಂದ ಬಾಯಿ ದುರ್ಗಂಧ, ಹಲ್ಲುಶೂಲೆ, ಹಲ್ಲು ಅಲ್ಲಾಡುವುದು, ಹಲ್ಲಿನ ವ್ರಣ, ಬಾವು, ಸೀಡೆ, ತುರಿಕೆ, ಹುಳು ಇವುಗಳು ನಾಶವಾಗುತ್ತವೆ.

ಶ್ಲೋ॥ ತಚ್ಚೂರ್ಣಂ ವದನೇ ಧೃತಂ ವಿಜಯತೇ ದೌರ್ಗಂಧದಂತ
ವ್ಯಥಾಂ ಚಾಂಚಲ್ಯತ್ವಮತಿವ್ರಣಶ್ವಯಥು ರುಕ್ಕಂಡೂ
ಕೃಮೀನ್ ದಾರಯೇತ್ ॥

17. ಮಹಾಶತಾವರೀರಸಾಯನ ೧ಸೇ ೩-೦-೦

ಎಲ್ಲಾ ಕ್ಲೇಶವನ್ನೂ ಪರಿಹರಿಸಿ ಆನಂದವನ್ನುಂಟುಮಾಡುವ, ಪ್ರಜಾಸೃಷ್ಟಿಗೆ ಕಾರಣರಾದ ಸಂತಾನವನ್ನುಂಟುಮಾಡುವುದಕ್ಕೆ ಸ್ಥಾನಭೂತರಾದ ಅತಿಕೋಮಲೆ

ಯರಾದ ಅಂಗನೆಯರು ಸ್ವಾಭಾವಿಕವಾದ ಸಂಕೋಚದಿಂದ ತಮ್ಮ ರೋಗವನ್ನು ಪ್ರಿಯರಿಗೂ ತಿಳಿಸದೆ ಸೌಖ್ಯ ಸಂತಾನಕ್ಕೆ ಹಾನಿಯನ್ನುಂಟುಮಾಡುವ ಮರ್ಮಸ್ಥಾನಗತವಾದ ಅನೇಕ ವಿಧವ್ಯಾಧಿಗಳಿಂದ ತೊಂದರೆಪಡುತ್ತಿರುವುದು ಎಲ್ಲರಿಗೂ ವಿದಿತವಾಗಿದೆ. ಹೀಗೆ ತಮ್ಮ ಬುದ್ಧಿಪೂರ್ವಕ ಕಾರಣದಿಂದಲೂ, ಇತರ ಕಾರಣದಿಂದಲೂ ಪ್ರಜಾವೃದ್ಧಿಗೆ ಆಕರವಾದ ರಜೋ ಗರ್ಭಾಶಯಗಳೆರಡೂ ಕೆಡುತ್ತವೆ. ಇವು ಕೆಡುವುದರಿಂದಲೇ ಸ್ತ್ರೀಯರು ಪ್ರತಿ ತಿಂಗಳಲ್ಲಿಯೂ ಕ್ರಮವಾಗಿ ಬಹಿಷ್ಠೆಯರಾಗದೇನೂ, ನಿಯಮವಿಲ್ಲದೆ ಆಗುತ್ತಲೂ, ಬಹಿಷ್ಠೆಯರಾಗುವುದಕ್ಕೆ ಮೊದಲೂ ಅನಂತರವೂ ಈ ಕಾಲಗಳ ಮಧ್ಯದಲ್ಲೂ ಬಹು ವ್ಯಥೆ ಪಡುತ್ತಾರೆ. ಸೊಂಟನೋವು, ಕಾಲುಸೇದುವಿಕೆ, ಶೂಲೆ ತೋರುವುವಲ್ಲದೆ ರಜಸ್ಸು ಹೆಚ್ಚಾಗಿ ಪ್ರವಹಿಸುವುದು, ಇದೇ ರಜೋದೋಷವು. ಈ ಶತಾವರೀ ರಸಾಯನದಿಂದ ಇಂಥಾ ರಜೋ ರೋಗಗಳು, ಗರ್ಭಾಶಯ ಬಾಡುವಿಕೆ, ಯೋನಿ ಸಂಕೋಚ, ಯೋನಿಕಂದ, ಗರ್ಭಾಶಯದಲ್ಲಿ ಸೋರುವ ಕೀವು, ಗರ್ಭಾಶಯದಿಂದೊಸರುವ ಬಿಳೀದ್ರವ,

[ಶ್ಲೋ॥ ರಜಃಪ್ರಸೇಕಾನ್ನಾರೀಣಾಂಮಾಸಿಮಾಸಿವಿಶುಧ್ಯತಿ । ಕೃತ್ಸ್ನಂಶರೀರಂದೋಷಾಶ್ಚನಪ್ರಮೇಹಂತ್ಯತಸ್ಸ್ತ್ರಿಯಃ॥

15. ವಕ್ತ್ರಾಭರಣಮಾತ್ರೆ ೧೦೦ಕ್ಕೆ ೦-೭-೧

ಗರ್ಮಿಯಿಂದ ನಾಲಗೆಯು ಒಡೆದಿರುವುದು, ದೋಗಲು ದೊರಲಾಗಿರುವುದು, ಬಾಯಿಯ ದುರ್ಗಂಧ, ಹುಗಳು ಮುಂತಾದ ಬಾಯಿರೋಗಗಳನ್ನು ಗುಣಪಡಿಸಿ, ಬಾಯಿಯನ್ನು ಸುಗಂಧವಾಗಿಡುತ್ತದೆ. ಇದನ್ನು ತಾಂಬೂಲದೊಡನೆ ಉಪಯೋಗಿಸಬಹುದು. ಗಸರಿಗೆ ತಕ್ಕಂತೆ ಮುಖಕ್ಕೆ ಆಭರಣವಾಗಿದೆ.

16. ದಂತಪ್ರಕಾಶಕ ಚೂರ್ಣ ೧ಡಬ್ಬಿ ೦-೬-೦

ಈ ಚೂರ್ಣದಿಂದ ಹಲ್ಲನ್ನುಜ್ಜಿ ಬಾಯಿಯಲ್ಲಿಟ್ಟುಕೊಳ್ಳುವುದರಿಂದ ಬಾಯಿ ದುರ್ಗಂಧ, ಹಲ್ಲುಶೂಲೆ, ಹಲ್ಲು ಅಲ್ಲಾಡುವುದು, ಹಲ್ಲಿನ ವ್ರಣ, ಬಾವು, ಪೀಡೆ, ತುರಿಕೆ, ಹುಳು ಇವುಗಳು ನಾಶವಾಗುತ್ತವೆ.

ಶ್ಲೋ || ತಚ್ಚೂರ್ಣಂವದನೇಧೃತಂ ವಿಜಯತೇ ದೌರ್ಗಂಧದಂತ
ವ್ಯಥಾಂಚಾಂಚಲ್ಯತ್ವ ಮತಿವ್ರಣಶ್ವಯಥು ರುಕ್ಕಂಡೂ
ಕ್ರಿಮಿರ್ದಾರಯೇತ್ ||

17. ಮಹಾಶತಾವರೀರಸಾಯನ ೧ಸೇ ೩-೦-೦

ಎಲ್ಲಾ ಕ್ಲೇಶವನ್ನೂ ಪರಿಹರಿಸಿ ಆನಂದವನ್ನುಂಟು ಮಾಡುವ, ಪ್ರಜಾಸೃಷ್ಟಿಗೆ ಕಾರಣರಾದ ಸಂತಾನವನ್ನುಂಟುಮಾಡುವುದಕ್ಕೆ ಸ್ಥಾನಭೂತರಾದ ಅತಿಕೋಮಲೆ

ಯರಾದ ಅಂಗನೆಯರು ಸ್ವಾಭಾವಿಕವಾದ ಸಂಕೋಚ ದಿಂದ ತಮ್ಮ ರೋಗವನ್ನು ಪ್ರಿಯರಿಗೂ ತಿಳಿಸದೆ ಸೌಖ್ಯ ಸಂತಾನಕ್ಕೆ ಹಾನಿಯನ್ನುಂಟುಮಾಡುವ ಮರ್ಮಸ್ಥಾನ ಗತವಾದ ಅನೇಕ ವಿಧವ್ಯಾಧಿಗಳಿಂದ ತೊಂದರೆಪಡುತ್ತಿರು ವುದು ಎಲ್ಲರಿಗೂ ವಿದಿತವಾಗಿದೆ. ಹೀಗೆ ತಮ್ಮ ಬುದ್ಧಿ ಪೂರ್ವಕ ಕಾರಣದಿಂದಲೂ, ಇತರ ಕಾರಣದಿಂದಲೂ ಪ್ರಜಾವೃದ್ಧಿಗೆ ಆಕರವಾದ ರಜೋ ಗರ್ಭಾಶಯಗಳೆರಡೂ ಕೆಡುತ್ತವೆ. ಇವು ಕೆಡುವುದರಿಂದಲೇ ಸ್ತ್ರೀಯರು ಪ್ರತಿ ತಿಂಗಳಲ್ಲಿಯೂ ಕ್ರಮವಾಗಿ ಬಹಿಷ್ಠೆಯರಾಗದೇನೂ, ನಿಯಮವಿಲ್ಲದೆ ಆಗುತ್ತಲೂ, ಬಹಿಷ್ಠೆಯರಾಗುವುದಕ್ಕೆ ಮೊದಲೂ ಅನಂತರವೂ ಈ ಕಾಲಗಳ ಮಧ್ಯದಲ್ಲೂ ಬಹು ವ್ಯಥೆ ಪಡುತ್ತಾರೆ. ಸೊಂಟನೋವು, ಕಾಲುಸೇದುವಿಕೆ, ಶೂಲೆ ತೋರುವುವಲ್ಲದೆ ರಜಸ್ಸು ಹೆಚ್ಚಾಗಿ ಪ್ರವಹಿಸುವುದು, ಇದೇ ರಜೋದೋಷವು. ಈಶತಾವರೀ ರಸಾಯನದಿಂದ ಇಂಥಾ ರಜೋ ರೋಗಗಳು, ಗರ್ಭಾಶಯ ಬಾಡುವಿಕೆ, ಯೋನಿ ಸಂಕೋಚ, ಯೋನಿಕಂದ, ಗರ್ಭಾಶಯದಲ್ಲಿ ನೋರುವ ಕೀವು, ಗರ್ಭಾಶಯದಿಂದೊಸರುವ ಬಿಳೀದ್ರವ,

[ಶ್ಲೋ|| ರಜಃಪ್ರಸೇಕಾನ್ನಾರೀಣಾಂಮಾಸಿಮಾಸಿವಿಶುಧ್ಯತಿ | ಕೃತ್ಸ್ನಂಶರೀರಂದೋಷಾಶ್ಚನಪ್ರಮೇಹಂತ್ಯತಸ್ಸ್ತ್ರಿಯಃ||

ಸ್ತ್ರೀಯರಿಗೆ ಪ್ರತಿಮಾಸದಲ್ಲಿಯೂ ಋತುವಾಗುವುದ ರಿಂದ ಎಲ್ಲಾ ಶರೀರವೂ, ದೋಷವೂ ಶುದ್ಧವಾಗುತ್ತವೆ. ಆದುದರಿಂದ ಸ್ತ್ರೀಯರಿಗೆ ಪ್ರಮೇಹವು ಹುಟ್ಟುವುದಿಲ್ಲ ವೆಂದೂ, ಹೀಗೆ ಪ್ರಮೇಹವು ಹುಟ್ಟದುದು ಯಾವ ಪ್ರಾಚೀನ ವೈದ್ಯರ ಅನುಭವಕ್ಕೂ ಬಂದಿಲ್ಲವೆಂದೂ, ಪ್ರಮೇಹವು ಹುಟ್ಟಿದಮೇಲೆ ಪ್ರಮೇಹಪಿಟಕ ಮುಂ ತಾದ ರೋಗಗಳು ಅಸಂಭವವೆಂದೂ ಹೇಳಲ್ಪಟ್ಟಿದೆ. ಆದರೂ ಈವಿಷಯವು ಶಂಕಾಸ್ಪದವೆಂದು ನವೀನರು ಹೇಳು ತಾರೆ. ಆದುದರಿಂದ ಸ್ತ್ರೀಯರಿಗೆ ರಜೋರೋಗಗಳೇ ಸಂಭವಿಸುತ್ತವೆ.] ಗರ್ಭಾಶಯಗತವಿಷ, ವ್ರಣ, ಯೋನಿ ವ್ರಣ, ಗರ್ಭಸ್ರಾವ, ಮತ್ತು ಪತನ, ಈರೋಗಗಳು ಗುಣ ವಾಗುತ್ತವೆ. (ಆಯುರ್ವೇದದಲ್ಲಿ)-

ಶ್ಲೋ॥ ಶಾಕೋಪವಾಸಾದತಿ ಮೈಥುನಾಚ್ಚ ವಿದಾಹಿಭಿಶ್ಚಾಪ್ಯುಪ
ತೀವಮುಷ್ಟಂ। ಪ್ರವರ್ತತೇಯೋನಿಮುಖಾದ ಶಾಲಿಹ್ಯಸೃ
ಗ್ದರಂತಂ ಪ್ರಬಲಂಹಿ ವಿದ್ಯಾತ್ ॥

ಹೆಚ್ಚಾಗಿ ತರ್ಕಾರಿ ಮುಂತಾದ ತಿಂಡಿ, ಉಪವಾಸ, ಹೆಚ್ಚಾದ ಮೈಥುನ, ದೀಕ್ಷ್ಣದ್ರವ್ಯ ಸೇವನಗಳಿಂದ ರಕ್ತವು ಬಹುವಾಗಿ ಕೆಟ್ಟುಯೋನಿಯಿಂದ ಸ್ರವಿಸುತ್ತದೆ. ಇದೇ ಅಸೃಗ್ದರ (ಕುಸುಮ)ವು. ನಿತ್ಯನಾಥೀಯದಲ್ಲಿ;

ಅಸೃಗ್ಧರ ರೋಗದಲ್ಲಿ ಅಪಥ್ಯವಾಡಿದರೆ ಪಿತ್ತಾಸೃಗ್ಧರವು ಹುಟ್ಟುತ್ತದೆ. ಇದೇ ಪ್ರದರವು. ಶುದ್ಧ ವನಸ್ಪತಿಗಳಿಂದಲೇ ಸಿದ್ಧಪಡಿಸಿದ ಈ ಲೇಹದಿಂದ ಪ್ರದರ (ಕೀರೆರೋಗ) ಅಸ್ಥಿಸ್ರಾವ (ಬಿಳೀಸೀರೆ) ಅಂತರ್ದಾಹ, ರಕ್ತಪಿತ್ತ, ಕ್ಷೀಣರೇತೋದೋಷ, ಪಿತ್ತರೋಗ, ಮೂತ್ರಕೃಛ್ರ, ಕ್ಷಯ, ಉನ್ಮಾದ, ಬಾಯಾರಿಕೆ ಇವುಗಳು ನಿರ್ಮೂಲವಾಗುವುವಲ್ಲದೆ, ಶರೀರಪುಷ್ಟಿಯೂ ಉಂಟಾಗುತ್ತದೆ.

ಶ್ಲೋ|| ಪ್ರದರೇಸ್ಥಿವಿಸಿಸ್ರುತೌ | ಅಂತರ್ದಾಹೇರಕ್ತಪಿತ್ತೇ ಕ್ಷೀ
ಣೇರೇತಸಿಪೈತ್ತಿಕೆ | ಮೂತ್ರಕೃಛ್ರಕ್ಷಯೋನ್ಮಾದೇತೃ
ಷ್ಣಾಯಾಂಬೃಹತ್ರಣಂಪರಂ ||

18. ವಸಂತಮಾಲಿನೀ ಸಿಂದೂರ ಅರ್ಧ ತೊಲೆ

ರೂ. ೨—೦—೦

ಹೆಂಗಸರ ಬಂಜೆರೋಗ, ಮತ್ತು ಗುಪ್ತ ರೋಗಗಳು, ಮಾಸಕಟ್ಟಲೆಯ ಅಕ್ರಮ, ಪ್ರದರ, ಕೈಕಾಲು ಕಣ್ಣಿಉರಿ, ಯೋನಿದೋಷ, ಲಿಂಗದೋಷ, ಮೂತ್ರದೋಷ, ಇವುಗಳನ್ನು ನಿವಾರಿಸುತ್ತದೆ. ವಿಶೇಷವೇನು ! ಮಹಾ ಶತಾವರಿ ರಸಾಯನದ ಗುಣಗಳೇ ಇವೆ.

ಸ್ತ್ರೀಯರಿಗೆ ಪ್ರತಿಮಾಸದಲ್ಲಿಯೂ ಋತುವಾಗುವುದ ರಿಂದ ಎಲ್ಲಾ ಶರೀರವೂ, ದೋಷವೂ ಶುದ್ಧವಾಗುತ್ತವೆ. ಆದುದರಿಂದ ಸ್ತ್ರೀಯರಿಗೆ ಪ್ರಮೇಹವು ಹುಟ್ಟುವುದಿಲ್ಲ ವೆಂದೂ, ಹೀಗೆ ಪ್ರಮೇಹವು ಹುಟ್ಟುದುದು ಯಾವ ಪ್ರಾಚೀನ ವೈದ್ಯರ ಅನುಭವಕ್ಕೂ ಬಂದಿಲ್ಲವೆಂದೂ, ಪ್ರಮೇಹವು ಹುಟ್ಟಿದ್ದಮೇಲೆ ಪ್ರಮೇಹಪಿಟಕ ಮುಂ ತಾದ ರೋಗಗಳು ಅಸಂಭವವೆಂದೂ ಹೇಳಲ್ಪಟ್ಟದೆ. ಆದರೂ ಈವಿಷಯವು ಶಂಕಾಸ್ಪದವೆಂದು ನವೀನರು ಹೇಳು ತಾರೆ. ಆದುದರಿಂದ ಸ್ತ್ರೀಯರಿಗೆ ರಜೋರೋಗಗಳೇ ಸಂಭವಿಸುತ್ತವೆ.] ಗರ್ಭಾಶಯಗತವಿಷ, ವ್ರಣ, ಯೋನಿ ವ್ರಣ, ಗರ್ಭಸ್ರಾವ, ಮತ್ತು ಪತನ, ಈರೋಗಗಳು ಗುಣ ವಾಗುತ್ತವೆ. (ಆಯುರ್ವೇದದಲ್ಲಿ)-

ಶ್ಲೋ॥ ಶಾಕೋಪವಾಸಾದತಿ ಮೈಥುನಾಚ್ಚ ವಿದಾಹಿಭಿಶ್ಚಾಸ್ರವ
ತೀವದುಷ್ಟಂ। ಪ್ರವರ್ತತೇಯೋನಿಮುನಾದ ಶಾಲಿಹ್ಯಸೃ
ಗ್ದರಂತಂ ಪ್ರಬಲಂಹಿ ವಿದ್ಯಾತ್ ॥

ಹೆಚ್ಚಾಗಿ ತರ್ಕಾರಿ ಮುಂತಾದ ತಿಂಡಿ, ಉಪವಾಸ, ಹೆಚ್ಚಾದ ಮೈಥುನ, ದೀಕ್ಷ್ಣದ್ರವ್ಯ ಸೇವನಗಳಿಂದ ರಕ್ತವು ಬಹುವಾಗಿ ಕೆಟ್ಟುಯೋನಿಯಿಂದ ಸ್ರವಿಸುತ್ತದೆ. ಇದೇ ಅಸೃಗ್ದರ (ಕುಸುಮ)ವು. ನಿತ್ಯನಾಥೀಯದಲ್ಲಿ;

ಅಸೃಗ್ಧರ ರೋಗದಲ್ಲಿ ಅಪಥ್ಯಮಾಡಿದರೆ ಪಿತ್ತಾಸೃಗ್ಧರವು ಹುಟ್ಟುತ್ತದೆ. ಇದೇ ಪ್ರದರವು. ಶುದ್ಧವನಸ್ಪತಿಗಳಿಂದಲೇ ಸಿದ್ಧಪಡಿಸಿದ ಈ ಲೇಹದಿಂದ ಪ್ರದರ (ಸೀರೆರೋಗ) ಅಸ್ಥಿಸ್ರಾವ (ಬಿಳೀಸೀರೆ) ಅಂತರ್ದಾಹ, ರಕ್ತಪಿತ್ತ, ಕ್ಷೀಣರೇತೋದೋಷ, ಪಿತ್ತರೋಗ, ಮೂತ್ರಕೃಛ್ರ, ಕ್ಷಯ, ಉನ್ಮಾದ, ಬಾಯಾರಿಕೆ ಇವುಗಳು ನಿರ್ಮೂಲವಾಗುವುವಲ್ಲದೆ, ಶರೀರಪುಷ್ಟಿಯೂ ಉಂಟಾಗುತ್ತದೆ.

ಶ್ಲೋ॥ ಪ್ರದರೇಽಸ್ಥಿವಿನಿಸ್ರುತೌ । ಅಂತರ್ದಾಹೇರಕ್ತಪಿತ್ತೇ ಕ್ಷೀ
ಣೇರೇತಸಿಪೈತ್ತಿಕೇ । ಮೂತ್ರಕೃಛ್ರಕ್ಷಯೋನ್ಮಾದೇತೃ
ಷ್ಣಾಯಾಂಬೃಹತ್ತ್ರಣಂಪರಂ ॥

18. ವಸಂತಮಾಲಿನೀ ಸಿಂದೂರ ಅರ್ಧ ತೊಲೆ

ರೂ. ೨—೦—೦

ಹೆಂಗಸರ ಬಂಜೆರೋಗ, ಮತ್ತು ಗುಪ್ತ ರೋಗಗಳು, ಮಾಸಿಕಟ್ಟಲೆಯ ಅಕ್ರಮ, ಪ್ರದರ, ಕೈಕಾಲು ಕಣ್ಣು ಉರಿ, ಯೋನಿದೋಷ, ಲಿಂಗದೋಷ, ಮೂತ್ರದೋಷ, ಇವುಗಳನ್ನು ನಿವಾರಿಸುತ್ತದೆ. ವಿಶೇಷವೇನು ! ಮಹಾ ಶತಾವರಿ ರಸಾಯನದ ಗುಣಗಳೇ ಇವೆ.

---

19. ಅಹಿಪತ್ರಿ ಚೂರ್ಣ ೧ ಡಬ್ಬಿ ರೂ. ೧-೦-೦

ಹೊಟ್ಟೆಶೂಲೆ, ಪರಿಣಾಮ ಶೂಲೆ, ೫ ವಿಧಗುಲ್ಮ ರೋಗ ಗಳು (ಗುಲ್ಮವೆಂದರೆ ವಾತಪಿತ್ತ ಶ್ಲೇಷ್ಮಗಳು ಹೆಚ್ಚಾಗಿ ಕೆರಳುವುದರಿಂದ ಹೊಟ್ಟೆಯಲ್ಲಾಗುವ ಗಂಟು) ಅಜೀರ್ಣ, ಶೂಲೆ ಇವನ್ನು ಧ್ವಂಸ ಮಾಡುತ್ತದೆ.

20. ವ್ರಣಾಂತ್ರಕ ರಸ, ೪೦ ದಿನಕ್ಕೆ ೨-೪-೦

ನಲವತ್ತು ದಿನಗಳು ನಾವು ಬರೆಯುವ ಅನುಪಾನದಂತೆ ಸೇವಿಸಿದರೆ ಫಿರಂಗಿರೋಗ, ವ್ರಣ, ಲೂತವ್ರಣ, ಭಗಂ ದರ, ತೆರತರದ ಹುಣ್ಣುಗಳು, ಬಹುವಿಧವ್ರಣ, ಮೇಢ್ರ ವ್ರಣ, ಮರ್ಮಸ್ಥಲ ವ್ರಣ, ದಂತವ್ರಣ ಕೈಕಾಲು ಬಿರಿವು ವ್ರಣಗಳು ಪರಿಷ್ಕೃತವಾಗುತ್ತವೆ. ಕೈಕಾಲು ಹುಣ್ಣುಗಳೂ ಭಗಂದರವೂ ನಾಶವಾಗುತ್ತವೆ.

ಶ್ಲೋ॥ ವ್ರಣಾಂತಕ ಇತಿಖ್ಯಾತೋದುಷ್ಟವ್ರಣಹರಃಪರಃ ॥

ಮುಂತಾಗಿ ರಸರತ್ನಾಕರ ಗ್ರಂಥೋಕ್ತವು.

21. ಚಂದ್ರೋದಯವರ್ತಿ೧೦ ತೊಲ ಅರ್ಧಕ್ಕೆ ರೂ. ೧—೦—೦.

ಈಚೆಗೆ ಪ್ರಾಪ್ತವಾದ ಕುರುಡು,ಕಣ್ಣುಕಾಣದಿರುವುದು, ತುರಿಕೆ, ಪರೆ, ಅರ್ಬುದ, ಮೂರು ವರ್ಷದಿಂದಿರುವ ಕಣ್ಣು

ಹೂವು, ದುರ್ಮಾಂಸ ಮುಂತಾದ ಕಣ್ಣಿನ ರೋಗಗಳನ್ನು ಪರಿಹರಿಸಿ ಕಣ್ಣನ್ನು ನಿರ್ಮಲವಾಗಿಡುತ್ತದೆ.

ಶ್ಲೋ|| ನಾಶಯೇತ್ತಿಮಿರಂಕಂಡೂಂ ಪಟಲಾನ್ಯರ್ಬುದಾನಿಚ |
(ಎಂತಪ್ರಾರಂಭಿಸಿ) ವರ್ತಿಕಸ್ತಂದೋಪ್ರೋದಯಾಧಿಕಾನ್ಯಾ ನೃ
ಣಾಂದೃಷ್ಟಿವಿಶೋಧಿನೀ ||

ಎಂತ ಆಯುರ್ವೇದೋಕ್ತ ವರ್ತಿಯು.

22. ನೃಪವಲ್ಲಭ ತೈಲ ೧ಶೀಸೆರೂ. ೧—೦—೦

ಈತೈಲವನ್ನು ಸೇದುವುದರಿಂದ ಶಿರೋರೋಗಗಳೆಲ್ಲವೂ ಹೋಗುತ್ತವೆ. ತಲೆಯಲ್ಲಿ ಉದುರಿದ ಕೂದಲು ಹುಟ್ಟುತ್ತದೆ ಮತ್ತು ಕಪ್ಪಾಗುತ್ತದೆ. ಹಲ್ಲಿನ ಬುಡದ ದುರ್ಗಂಧವು ಹೋಗುವುದು. ಗರುಡನಿಗೆ ಸರಿಯಾದ ದೃಷ್ಟಿ ಎಂದರೆ ನೇತ್ರರೋಗಗಳು ಹೋಗಿ ಕಣ್ಣು ಸ್ವಚ್ಛವಾಗುತ್ತದೆ. ಅರೆತಲೆ ನೋವು ಸೂರ್ಯಾವರ್ತ ತಲೆನೋವು ಮುಂತಾದ ತಲೆನೋವುಗಳು ಶಾಂತವಾಗುತ್ತವೆ.

ಶ್ಲೋ|| ನಾಸಿಕಯೋರ್ವಿನಿಧೇಯಶ್ಶೀಘ್ರಂನಿಹನ್ತ್ಯಶ್ಶಿರಸೋವಿಕಾ
ರಾನ್| ಚ್ಯುತಾಂಶ್ಚ ಕೇಶಾನ್ ಪಲಿತಾಂಶ್ಚ ದಂತಾನ್ ದುರ್ಗಂ
ಧಮೂಲಾಂಶ್ಚ ವ್ಯಪಾಕರೋತಿ | ಸುವರ್ಣದೃಷ್ಟಿ ಪ್ರತಿ
ಮಂಚಚಕ್ಷುಃಶಿರೋರ್ತಿನಾಶಂಚಕರೋತಿಸಮ್ಯಕ್ ||

---

23. ಚಂದ್ರೋದಯ ರಸ ೨೫ ಮಾತ್ರೆ
ರೂ. ೧—೦—೦

ಜನನೇಂದ್ರಿಯದಲ್ಲಿ ನೋವೂ, ಹುಣ್ಣೂ, ಹುಟ್ಟಿ ಅದರಲ್ಲಿ ಕೀವು ಉಂಟಾಗಿ ಮೂತ್ರದ್ವಾರದಿಂದ ಸೋರು ವುದು. ಇದೇ ಪ್ರಮೇಹವು. ಮಧುಮೇಹ ಮುಂತಾದ ೨೦ ತರಹೆಯ ಮೇಹರೋಗಗಳನ್ನೂ, ಪಿಟಿಕಾರೋಗಗ ಳನ್ನೂ ಈ ಮಾತ್ರೆಯು ನಿರ್ಮೂಲ ಪಡಿಸುತ್ತದೆ.

ಶ್ಲೋ॥ ಪ್ರಮೇಹಾನ್ ವಿಂಶತಿಂಹಂತಿ ॥

24. ಚಂದ್ರಕಲಾದಿ ಚೂರ್ಣ ೧ ಡಬ್ಬಿ ೧-೪-೦

೮ ವಿಧವಾದ ಮೂತ್ರಕೃಛ್ರ (ಮೂತ್ರಕೃಛ್ರವೆಂದರೆ ಅತಿಕಷ್ಟದಿಂದ ಅನೇಕಸಾರಿ ಸ್ವಲ್ಪಸ್ವಲ್ಪವಾಗಿನಾನಾಬಣ್ಣ ಹಿಂದ ಮೂತ್ರಬರುವುದು) ಮೂತ್ರಾತೀತ, ಮೂತ್ರಜಡರ, ಮೂತ್ರೋತ್ಸಂಗ ಮೂತ್ರಕ್ಷಯ ಮುಂತಾದ ೧೩ ವಿಧವೂ ಮೂತ್ರಾಘಾತಗಳು, ಅಶ್ಮರೀರೋಗ (ಅಶ್ಮರಿ ಎಂದರೆ ಮೂತ್ರವೂ ಧಾತುವೂ ಗಟ್ಟಿಯಾಗಿ ಕಲ್ಲಿನಂತಾಗಿ ಮೂತ್ರದ್ವಾರವು ತಡೆದು ಬಹುಕಷ್ಟದಿಂದ ಮೂತ್ರಹೋ ಗುವುದು) ಇವು ಈ ಚೂರ್ಣದ ಸೇವನೆಯಿಂದ ನಿರ್ಮೂಲ ವಾಗುತ್ತವೆ.

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪಾದ, ಶೃಂಗೇರಿ.

25. ಕಾಲಾಗ್ನಿರುದ್ರರಸ ೨೫ ಮಾತ್ರೆ ೧-೦-೦

ಊರ್ಧ್ವವಾತ, ಪಾರ್ಶ್ವವಾಯು, ಸ್ಕಂಧವಾತ, ಧೂಮ ವಿಧೂಮ, ಆಢ್ಯ, ಭೋಗ, ಕಲಾವಾತದಂಡವಾತ, ಜಾನು ಜಂಘಾವಾತ, ಮುಂತಾದ ೮೦ ವಿಧವಾಯು ರೋಗಗ ಳನ್ನೂ, ಗುಲ್ಮ, ಭೇದಿರೋಗ ಮುಂತಾದ ರೋಗಗಳನ್ನು ನಿರ್ಮೂಲಪಡಿಸುತ್ತೆಂದು ಪೂಜ್ಯಪಾದರು ಹೇಳಿರುವ ಪ್ರಸಿ ದ್ಧವಾದ ಮಾತ್ರೆಯು. ವಾಯುರೋಗಕ್ಕೆಲ್ಲಾ ಸಂಜೀವಿನಿ.

ಶ್ಲೋ॥ ಅಶೀತಿವಾತಜಾನ್ (೮೦ ವಾಯು) ರೋಗಾನ್ ಗುಲ್ಮಂಚ
ಗ್ರಹಣೀಗದಾನ್ । ರಸಃಕಾಲಾಗ್ನಿರುದ್ರೋಯಂಪೂಜ್ಯ
ಪಾದೇನ ನಿರ್ಮಿತಃ ॥

26. ವಿಷತಿಂದುಕಾದಿ ತೈಲ ತೊಲ ೧ಕ್ಕೆ ೧-೦-೦

ಈ ತೈಲವನ್ನು ಹಚ್ಚುವುದರಿಂದ ಸರ್ವಾಂಗವಾತ, ಸಂಧಿವಾತ, ಅಸ್ಥಿವಾತ, ಆಮ್ಲವಾತ, ಕಫವಾತ, ಘೋರ ವಾದ ವಾಯುನೋವುಗಳು, ಅನುಲೋಮವಿಲೋಮವಾ ಯುಗಳು, ಊರುಸ್ತಂಭವಾತ, ಧನುರ್ವಾತ ಮುಂತಾದ ವಾಯು ರೋಗಗಳು ಗುಣವಾಗುತ್ತವೆ.

---

27. ಅಜೀರ್ಣಬಲಕಾಲಾನಲರಸಮಾತ್ರೆ ಚಿಕಿತ್ಸೆ

೧—೪—೦

ಎಲ್ಲಾ ರೋಗಗಳಿಗೂ ಮೂಲಕಾರಣವು ಅಜೀರ್ಣ. ಜೀರ್ಣ ಬಲವಿಲ್ಲದಿರುವುದು ಎಂದು ಚರಕಸಂಹಿತೆಯಲ್ಲಿ ವಿಶದಪಡಿಸುವಂತೆ ಯಾವ ರೋಗವೂ ಜೀರ್ಣೇಂದ್ರಿಯಕ್ಕೆ ತಟ್ಟದೆ ಉಂಟಾಗುವುದಿಲ್ಲ. ಈ ಅಜೀರ್ಣ ಮತ್ತು ಅಗ್ನಿಮಾಂದ್ಯಕ್ಕೆ ಬಹಳ ಹೆಚ್ಚಾದ ಅಥವಾ ಕಡಿಮೆಯಾದ ಹಿತವಲ್ಲದ ಆಹಾರ, ಬಹಳಕಾಲ ಉಪವಾಸವಿದ್ದು ಒಮ್ಮೆಯೇ ಹೆಚ್ಚು ಊಟಮಾಡುವುದು, ವ್ಯಾಯಾಮರಾಹಿತ್ಯ, ಅಫೀಮು, ಮದ್ಯ ಹೊಗೆಸೊಪ್ಪಿನ ಅಭ್ಯಾಸಗಳು, ಉಷ್ಣಪಾನ ಮುಂತಾದವುಗಳೇ ಕಾರಣವಾಗಿವೆ. ಅಜೀರ್ಣರೋಗವು ೬ ವಿಧವೆಂದು ಸುಶ್ರುತಮಹರ್ಷಿಗಳಮತವು. ಕೆಲವರಿಗೆ ತಂದೆತಾಯಿಗಳ ಅಶಕ್ತತೆಯೂ ಪರಂಪರೆಯಾಗಿ ಕಾರಣವಾಗುವುದು. ಮನುಷ್ಯನಿಗೆ ಜೀರ್ಣಶಕ್ತಿಯೇ ದೇಹದ ಸಾಮರ್ಥ್ಯಕ್ಕೆ ಕಾರಣವು. ಜೀರ್ಣಶಕ್ತಿಯಿಲ್ಲದಿದ್ದರೆ ಯಾವಸುಖವೂ ಇಲ್ಲ. ಕೆಲವರಿಗೆ ಬಾಲ್ಯದಿಂದಲೂ ಈವ್ಯಾಧಿಯಿರುವುದು. ಇಂಥವರು ಉಪೇಕ್ಷೆಮಾಡದೆ ಜೀರ್ಣಶಕ್ತಿಯನ್ನು ಕ್ರಮಪಡಿಸಿಕೊಳ್ಳಬೇಕು.

ಭೋಜನವಾದನಂತರ ನೂರುಹೆಜ್ಜೆನಡೆದು ಎಡದಮಗ್ಗುಲಾಗಿ ಕುಳಿತು ಮನಸ್ಸಿಗೆ ಪ್ರಿಯವಾದ ಶಬ್ದ, ರಸ, ರೂಪ,

---

ಕೆ. ಶೇಷಶಾಸ್ತ್ರೀ, ಆಯುರ್ಭಿಷಕ್ಪಾದ, ಶೃಂಗೇರಿ.

ಸ್ಪರ್ಶ, ಗಂಧ ಮುಂತಾದವನ್ನು ಸೇವಿಸುವುದರಿಂದಲೂ, ಚೆನ್ನಾಗಿ ಅಗಿದು ನುಂಗುವುದರಿಂದಲೂ ಅನ್ನವು ಚೆನ್ನಾಗಿ ಪಚನವಾಗುವುದು. ಹೀಗೆ ಮಾಡದಿರುವುದರಿಂದಲೂ ಹಲವರಲ್ಲಿ ರೋಗವು ಅಂಕುರಿಸುವುದು.

ಶ್ಲೋ॥ ಭುಕ್ತ್ವಾ ಶತಪದಂ ಗಚ್ಛೇತ್ ವಾಮಪಾರ್ಶ್ವೇನ ಸಂವಿಶೇತ್ । ಶಬ್ದರೂಪರಸಸ್ಪರ್ಶಗಂಧಾಂಶ್ಚ ಮನಸಃ ಪ್ರಿಯಾನ್ । ಭುಕ್ತವಾನುಪಸೇವೇತ ತೇನಾನ್ನಂ ಸಾಧು ತಿಷ್ಠತಿ॥

ಈ ಮೇಲ್ಕಂಡ ಮಾತ್ರೆಯನ್ನು, ಗರುಸಾನಂದರು ಭೋಜರಾಜನಿಗೆ ಭೋಜನೇಚ್ಛೆಯುಂಟಾಗುವಂತೆ ಉಪದೇಶಿಸಿರುತ್ತಾರೆ. ಈ ಮಾತ್ರೆಯು ಎಂಥಾ ಅಗ್ನಿಮಾಂದ್ಯ (ಡಿಸ್ಪೆಪ್ಸಿಯ) ಅಜೀರ್ಣ, ವಿಷೂಚಿ, ಆಮವಾಯು, ಮಲಬಂಧಗಳು, ಪ್ಲೀಹ, ಪಾಂಡು, ಕೆಮ್ಮು, ಉಬ್ಬಸ, ಬಾಣಂತಿಯರ ಅಜೀರ್ಣ, ಭೇದಿ, ಶೀತ, ಹುಳಿ ತೇಗು, ಹೊಟ್ಟೆಶೂಲೆ, ಉದರರೋಗ, ಎಳವು, ಇವನ್ನು ಪರಿಹರಿಸಿ ಜೀರ್ಣ ಶಕ್ತಿಯನ್ನುಂಟು ಮಾಡುತ್ತದೆ.

ಶ್ಲೋ॥ ರಸೋ ಜೀರ್ಣಬಲಕಾಲಾನಲ ಏಷ ಪ್ರಕೀರ್ತಿತಃ । ಅನೇಕ ಕಾಲ ನಷ್ಟಾಗ್ನೇ (ಅಗ್ನಿಮಾಂದ್ಯ) ರ್ದೀಪನಃ ಪರಮಸ್ಮೃತಃ। ಏಂತ (ಪ್ರಾರಂಭಿಸಿ) ದ್ವಿಯಾಮೇನ ಚ ತತ್ಸರ್ವಂ ಭಸ್ಮೀಭವತಿ ನಿಶ್ಚಿತಂ। ಭೋಜಸ್ಯಾನ್ನಪತೇಃ ಕಾಂಕ್ಷಾ ಭೋಜನೇ ಕೃಪಯಾ ಕೃತಾ ॥

ಎಂತ ಬಹು ಪ್ರಶಸ್ತ್ಯವಾದದ್ದು.

23. ಶಾರದ ಚಂದ್ರ ಸಿಂದೂರ ರೂ. ೪-೦-೦

ಮಾತ್ರೆಯೊಡನೆ ಒಬ್ಬರಿಗೆ ತಕ್ಕಷ್ಟು ೨ ತಿಂಗಳಿಗೆ. ಜನನವಾದ ಮೊದಲು ೧|| ಅಥವಾ ೨ ತಿಂಗಳು ಬಾಣಂತಿಯರು ಸೇವಿಸತಕ್ಕದ್ದು. ಇದರಿಂದ ಬಾಣಂತಿಯರು ಆರೋಗ್ಯಹೊಂದಿ ದೃಢಕಾಯರಾಗುತ್ತಾರೆ. ಈ ಔಷಧ ವೊಂದೇ ಖಚಿತವಾಗಿ ಪೂರ್ಣವಾಗುತ್ತದೆ. ಅನೇಕರು ಸರಿಯಾದ ಚಿಕಿತ್ಸೆ ಇಲ್ಲದೆ ನರಳಿ ವಿಧವಿಧವ್ಯಾಧಿಗೆ ಗುರಿಯಾಗುತ್ತಾ ಇರುವದು ಶೋಚನೀಯವಾಗಿದೆ. ಇದು ಬಹೂಪಯುಕ್ತವು. ಪಥ್ಯವು ಸುಲಭವಾಗಿದೆ. ಸನ್ನಿವಾತಗಳು, ಜ್ವರ, ಕಫ ಮುಂತಾದ ರೋಗಗಳನ್ನು ಗೆಲ್ಲುವುದು. ಹೆಚ್ಚು ಮಾತೇನು ! ಬಾಣಂತಿಯರಿಗೆ ಆರೋಗ್ಯ ಸುಖನ್ನುಂಟು ಮಾಡುವದಲ್ಲದೆ ಮಗುವಿಗೂ ಆರೋಗ್ಯದಾಯಕವಾಗುತ್ತದೆ. ಅನೇಕಸರ್ಟಿಫಿಕೇಟುಗಳನ್ನು ಪಡೆದಿದೆ.

2೨. ಕಾಂಕಾಯನ ಗುಟಿಕಾ ೨೫ಮಾತ್ರೆ ರೂ. ೧—೪—೦

ಮೂಲವ್ಯಾಧಿರೋಗವು ಇದರಿಂದ ಗುಣವಾಗುತ್ತದೆ. ಕ್ಷಾರ, ಅಗ್ನಿ, ಶಸ್ತ್ರ, (ಬೆಂಕಿ, ಕೊಯ್ಯುವುದು,)ಚಿಕಿತ್ಸೆಗ

ಳಿಂದಲೂ ಗುಣವಾಗದಿರುವ ಮೂಲವ್ಯಾಧಿ ರೋಗಗಳು ಗುಣವಾಗುತ್ತವೆ ಎಂದು ಕಾಂಕಾಯನಋಷಿ ನಿರ್ಮಿತ ವಾದ ಗುಟಿಕೆಯು.

ಶ್ಲೋ॥ ಕಾಂಕಾಯನೇನಮುನಿನಾವಟಿಕಃಶಿಲಾಯುಮುಕ್ತಃಪ್ರಜಾ
ಹಿತತಮೋನಗುದಾಮಯಘ್ನಃ। ಕ್ಷಾರಾಗ್ನಿಶಸ್ತ್ರಪ
ತನ್ಮೈರಪಿಯೇನಸಿದ್ಧಾಸ್ಸಿದ್ಧ್ಯಂತ್ಯನೇನವಟಿಕೇನಗುದಾ
ಮಯಾಸ್ತೇ॥

30. ಸರ್ವಾಂಗ ಸುಂದರೀ ಗುಟಿಕಾ ೨೫
ಮಾತ್ರೆ ರೂ. ೧—೮—೦

ದದ್ರುಕುಷ್ಠ, ಮಂಡಲಕುಷ್ಠ, ಕಕಸಾಕುಷ್ಠ, ಔದುಂ ಬರಕುಷ್ಠ, ಕಿಟಿಭಕುಷ್ಠ, ವೈಪಾದಿಕಕುಷ್ಠ, ಮುಂತಾದ ಎಲ್ಲಾ ತರಹೆ ಕುಷ್ಠ ರೋಗಗಳೂ ಚರ್ಮ ರೋಗಗಳೂ ಪರಿಹೃತವಾಗುತ್ತವೆ.

31. ದರದಾದಿಲೇಪ ಡಬ್ಬಿ ೧ಕ್ಕೆ ರೂ. ೧-೦-೦

ಎಲ್ಲಾ ತರಹೆ ಕುಷ್ಠಗಳು, ಚರ್ಮವ್ಯಾಧಿ, ವ್ರಣಗಳು ಇದರ ಲೇಪನದಿಂದ ಗುಣವಾಗುತ್ತವೆ.

32. ಅಮೃತಾದಿ ಚೂರ್ಣ ೧ ಡಬ್ಬಿ ೧೨ ಆ.
ಜೀವನಕಾರಕ ಭಸ್ಮ ಅರ್ಧ ತೊಲೆ ರೂ. ೧-೦-೦

ಮಕ್ಕಳ ಅಸ್ಥಿಗತಜ್ವರ, ಮಕ್ಕಳಿಗೆ ರಕ್ತವಿಲ್ಲದೇ ದೇಹವು ಜಿಳ್ಳಗಿರುವುದು, ಅಶಕ್ತಿ, ಆಗಾಗ್ಗೆ ಭೇದಿ, ಅಜೀರ್ಣ,

ಅರುಚಿ, ಮಕ್ಕಳ ಜ್ವರಗಳು ನಿವೃತ್ತಿಯಾಗಿ ಜೀರ್ಣಶಕ್ತಿ, ಕಾಂತಿ, ರಕ್ತವೃದ್ಧಿಗಳು ಉಂಟಾಗುತ್ತವೆ.

33. ಕರ್ಣವ್ಯಾಧಿಘ್ನ ತೈಲ ೧ ತೊಲ ಆ. V.

ಈತೈಲವನ್ನು ಕಿವಿಯಲ್ಲಿ ಹಾಕುವುದರಿಂದ ಕಿವಿರೋಗ, ಕಿವಿಯೊಳಗಿನ ಝುಂಕಾರ, ಕಿವುಡು, ಕಿವಿಶೂಲೆ ಮುಂತಾದ ಕರ್ಣರೋಗಗಳನ್ನು ಪರಿಹರಿಸುತ್ತೆಂದು ಚರಕ, ಸುಶ್ರುತೋಕ್ತ ತೈಲವು.

34. ಮಹಾವಾಸಾದ್ಯವಲೇಹ ೧ಸೇರು ೨ರೂ.

ಕೆಮ್ಮು, ಉಬ್ಬಸಕ್ಕೆ ಈಲೇಹವು ಪ್ರಶಸ್ತವು. ಕೆಮ್ಮು, ಉಬ್ಬಸ, ಕ್ಷಯ, ರಕ್ತಪಿತ್ತ, ಕಫ, ಪೀನಸೆ, ಹೃದ್ರೋಗ ರಕ್ತವಾಂತಿ ಇವುಪರಿಹೃತವಾಗುತ್ತವೆ.

ಶ್ಲೋ॥ ಯೋಜ್ಯಂಪರಾರ್ಥಂಶ್ವಾಸನೇಚಕಾಸೇ॥

35. ಕಾಸಕಂಡನಾವಲೇಹ ೩ ತೊಲೆ ೧ ರೂ.

ಎಲ್ಲಾ ತರಹೆಯ ಕೆಮ್ಮುಗಳು, ವೈದ್ಯರಿಂದ ಸಾಧ್ಯವಿಲ್ಲದೇ ಬಿಟ್ಟಕೆಮ್ಮುಗಳು, ಅಸಾಧ್ಯವಾದ ಮತ್ತು ಹಳೆತಾದ ಅಥವಾ ಪಥ್ಯವಿಲ್ಲದೆ ಬಂದ ಕೆಮ್ಮುಗಳು ನಾಶವಾಗುತ್ತವೆಂದು ಆತ್ರೇಯೋಕ್ತ ಔಷಧವು. (ಲೇಹವೆಂದರೆ ತಿನ್ನುವ ಪದಾರ್ಥವೆಂದು ಸಂಸ್ಕೃತದಲ್ಲಿ ಅರ್ಥವು ಸಕ್ಕರೆ ಸೇರಿಸುವುದೇ ಲೇಹವಲ್ಲವು.)

ಶ್ಲೋ ॥ ಅಸಾಧ್ಯಾಭಿಷಜಾತ್ಯಕ್ತಾಶ್ಚಿರಜಾಃ ಪಥ್ಯವರ್ಜಿತಾಃ ।
ಯೇಕಾಸಾಸ್ತೇಪ್ಯನೇನಾಶುಪ್ರಣಶ್ಯಂತಿ ನಸಂಶಯಃ ॥
ಕಾಳಕಂಡನನಾಮಾಯಂಯೋಗ ಆತ್ರೇಯಭಾಷಿತಃ ॥

36· ಶ್ವಾಸಕಾಳೇಶ್ವರರಸ ೨ ಮಾತ್ರೆ ೧ರೂ.

ಕಫದಿಂದಾದ ಕೆಮ್ಮು, ಕಫದಉಬ್ಬಸ, ಎದೆಯಲ್ಲಿಹತ್ತಿ ಬರುವುದು, ಮಲೆನಾಡಿನಲ್ಲಿರುವ ರೇಷ್ಮೆರೋಗ, (ಜ್ವರಯುಕ್ತವಾಗಿಯೂ ಕೇವಲವಾಗಿಯೂ ಬರುವ ಅಸಾಧ್ಯಕಫರೋಗವೇ ರೇಷ್ಮೆರೋಗವು) ಐದು ವಿಧ ಉಬ್ಬಸವೂ, ಕ್ಷಯದಿಂದ ಬರುವ ಕಫ, ಕ್ಷಯ, ಊರ್ಧ್ವಶ್ವಾಸ, ದಮ್ಮು ಉಬ್ಬಸದಿಂದ ಬರುವ ಅಜೀರ್ಣ, ನಿದ್ರಾಭಂಗ ಇವು ನಾಶವಾಗುವುವು.

ಶ್ಲೋ ॥ ಪಂಚಕಾಸಾನ್ ಕಫಂಘೋರಮೂರ್ಧ್ವಶ್ವಾಸಂ ಕಫಕ್ಷಯಂ । ಶ್ವಾಸಕಾಳೇಶ್ವರೋಹಂತಿ ದೇವಾನಾಮಪಿ ದುರ್ಲಭಃ ॥

37· ತ್ರಿಂತ್ರಣೀ ಮಂಡೂರಂ ತೊ. ೧ಕ್ಕೆ ೨ರೂ

ಕೈಕಾಲು ಊದುವುದು, ಊದುಗಾಮಿಲೆ, ಮೈಯೆಲ್ಲಾ ನೀರುತುಂಬಿಕೊಳ್ಳುವುದು, ಉಬ್ಬಸ, ಒಳಜ್ವರ, ಇವುಪರಿಹಾರವಾಗುವುವಲ್ಲದೆ ಎಂಥಾ ಅಸಾಧ್ಯವಾದ ಮೈ ಕೈ ಬಾಯುವ ರೋಗವೂ ಸರ್ವಾಂಗ ಬಾಯುವ ರೋಗವೂ ನಿಶ್ಶೇಷವಾಗಿ ಗುಣವಾಗುತ್ತವೆ. ಅನೇಕವಾಗಿ ಜನರು ಗುಣ

ಅರುಚಿ, ಮಕ್ಕಳ ಜ್ವರಗಳು ನಿವೃತ್ತಿಯಾಗಿ ಜೀರ್ಣಶಕ್ತಿ, ಕಾಂತಿ, ರಕ್ತವೃದ್ಧಿಗಳು ಉಂಟಾಗುತ್ತವೆ.

33. ಕರ್ಣವ್ಯಾಧಿಘ್ನ ತೈಲ ೧ ತೊಲ ೮. V.

